# ಹಂಪಿ ಟೈಮ್ಸ್
HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA



ಇಂದು ಹಾಗೂ ಹಿಂದಿನ ಹಂಪಿ ಟೈಮ್ಸ್ ಕಲರ್‌ಫುಲ್ ಇ-ದಿನಪತ್ರಿಕೆ ಓದಲು QR ಕೋಡ್ ಸ್ಕ್ಯಾನ್ ಮಾಡಿ ಓದಿರಿ

No.1 Leading in Local News Paper

60,000

HAMPI TIMES E-PAPER READES

94486 33038

NEWS PAPER ADD - THE BEST ADVERTISING PLATFORM TO BOOST YOUR BUSINESS

E-mail: hampitimes@gmail.com | # Valmiki Circle hospet-583201



ಸಂಪುಟ:01 • ಸಂಚಿಕೆ:314 • ನೋಂದಣಿ ನಂ.:KARKAN27911 • ವಿಜಯನಗರ • 15.05.2024 • ಬುಧವಾರ • ಪುಟ:04 • ಬೆಲೆ:2

Volume:01 • Issue:314 • Reg.No:KARKAN27911 • VIJAYANAGARA • 15.05.2024 • Wednesday • Page:04 • Rs:2



ಹಂಪಿ ಟೈಮ್ಸ್ ವಿಜಯನಗರದ ಹೆಮ್ಮೆ e-paper

REACH EVERY WHERE NO BORDER



9448633038
www.hampitimes.com

S.M.TRADERS & SERVICES
ATLAS COPCO
COMPRESSORS, HOSEPIPE, DRILL RODS,SPARE PARTS Etc.
Contact for Details
96866 63125
96866 63132
96864 13132
Hampi Road, Hosapete-583201

ವಿವೇಕಶ್ರೇಯಾಲಾಪ
ಸಂಗೀತ ತರಬೇತಿ
VIVĒKASRĒYĀLĀPA
VEENA INSTRUMENTAL
VOCAL - KARNATIC
AND FILM MUSIC Classes
contact for more information
91082 26938
90368 65666
Near Honda Showroom, Hosapete-583201


# ವೈದ್ಯರು ನಿರ್ಲಕ್ಷ್ಯಸಿದರೆ ಎಫ್‌ಐಆರ್ ನಿಶ್ಚಿತ

**ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಖಡಕ್ ಸೂಚನೆ | ರೋಗಿಗಳೊಂದಿಗೆ ಸೌಜನ್ಯಯುತವಾಗಿ ನಡೆದುಕೊಳ್ಳಿ | ಹಣಗಳಿಸ ಬಹುದು, ಹೋದ ಜೀವ ಮತ್ತೆ ಬಾರದು**

**ಕೆಪಿಎಂಇ ನಿಯಮ ಪಾಲನೆ ಕಡ್ಡಾಯ | ಘೋಷಣೆಯಲ್ಲಿರುವಂತೆ ಸಿಬ್ಬಂದಿ, ಸೌಲಭ್ಯ ಇರಲಿ | ಖಾಸಗಿ ಆಸ್ಪತ್ರೆಗಳ ಸ್ಥಿತಿಗತಿ ಪರಿಶೀಲನೆಗೆ ವಿಶೇಷ ತಂಡ ರಚನೆ**

**ಖಾಸಗಿ ಆಸ್ಪತ್ರೆಗಳಲ್ಲಿ ನಿಯಮ ಪಾಲನೆಯಾಗುತ್ತಿಲ್ಲವೆಂಬುದು ಮೇಲ್ನೋಟಕ್ಕೆ ಸಾಬೀತು! | ಡಿಸಿ ಆದೇಶದವರೆಗೂ ಎಚ್ಚೆತ್ತುಕೊಳ್ಳದ ಜಿಲ್ಲಾ ಆರೋಗ್ಯ ಇಲಾಖೆ**

**■ ಹಂಪಿ ಟೈಮ್ಸ್ ಹೊಸಪೇಟೆ**

ಇತ್ತೀಚೆಗೆ ನಗರದ ಖಾಸಗಿ ಶರಣಂ ಆಸ್ಪತ್ರೆ ಸೇರಿದಂತೆ ಕೆಲ ಖಾಸಗಿ ಆಸ್ಪತ್ರೆಗಳಲ್ಲಿ ವೈದ್ಯರು, ಸಿಬ್ಬಂದಿಗಳ ನಿರ್ಲಕ್ಷ್ಯ ಮತ್ತು ರೋಗಿಗಳಿಗೆ ಸರಿಯಾಗಿ ಚಿಕಿತ್ಸೆ ಸಿಗದೇ ಸಾವುಗಳು ಸಂಭವಿಸುತ್ತಿವೆ ಎನ್ನುವ ದೂರುಗಳು ಅನೇಕ ಬಂದಿದ್ದು, ಖಾಸಗಿ ವೈದ್ಯರು ಗಂಭೀರವಾಗಿ ಪರಿಗಣಿಸಬೇಕು. ನಿರ್ಲಕ್ಷಿಸಿದರೆ ಅವರ ವಿರುದ್ಧ ಎಫ್‌ಐಆರ್ ದಾಖಲಿಸಿ, ಲೈಸೆನ್ಸ್ ರದ್ದುಗೊಳಿಸಲಾಗುವುದು ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ವೈದ್ಯರಿಗೆ ಖಡಕ್ ಸೂಚನೆ ನೀಡಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಹರಿಬಾಬು, ಡಿಎಚ್‌ಒ ಶಂಕರನಾಯ್ಕ ಅವರ ಸಮ್ಮುಖದಲ್ಲಿ ಜಿಲ್ಲೆಯ ಖಾಸಗಿ ಆಸ್ಪತ್ರೆಗಳ ಮುಖ್ಯಸ್ಥರು ಮತ್ತು ಆರೋಗ್ಯ ಇಲಾಖೆಯ ಅಧಿಕಾರಿಗಳೊಂದಿಗೆ ಮಂಗಳವಾರ ನಡೆದ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದರು. ನಗರದಲ್ಲಿನ ಕೆಲ ಖಾಸಗಿ ಆಸ್ಪತ್ರೆಗಳಲ್ಲಿ ಸರಿಯಾಗಿ ಚಿಕಿತ್ಸೆ ನೀಡದ್ದರಿಂದ ಸಾವುಗಳು ಸಂಭವಿಸುತ್ತಿವೆ ಎಂದು ಸ್ಥಳೀಯ ಸಂಘ ಸಂಸ್ಥೆಗಳಿಂದ ದೂರುಗಳು ಬಂದಿವೆ. ನಗರದ ಅನೇಕ ಖಾಸಗಿ ಆಸ್ಪತ್ರೆಗಳಲ್ಲಿ ಕೆಪಿಎಂಇ ನಿಯಮಾನಸಾರ ಮತ್ತು ಆಸ್ಪತ್ರೆ ಆರಂಭಿಸುವಾಗ ಸರ್ಕಾರಕೆಕ ಸಲ್ಲಿಸಿದ ಘೋಷಣೆಗೆ ತಕ್ಕಂತೆ ವೈದ್ಯರು, ಸಿಬ್ಬಂದಿ ಮತ್ತು ಉಪಕರಣಗಳು ಇರಬೇಕು. ಬ್ರೂಣ ಪರೀಕ್ಷೆ, ಬ್ರೂಣ ಹತ್ಯೆ ಮಾಡಬಾರದು. ಗಂಡಾಂತರ ಹೆರಿಗೆ, ಅಪ್ರಾಪ್ತವಯಸ್ಸಿನಲ್ಲಿ ಗರ್ಭಿಣಿಯಾಗಿರುವ ಬಾಲಕಿಯರು ಖಾಸಗಿ ಆಸ್ಪತ್ರಗಳಿಗೆ ಬಂದಲ್ಲಿ ಕೂಡಲೇ ಜಿಲ್ಲಾ ಆರೋಗ್ಯಾಧಿಕಾರಿಗಳ ಗಮನಕ್ಕೆ ತರಬೇಕು.



ನಿರ್ಲಕ್ಷ್ಯಸಿದರು ಕಾನೂನು ಕ್ರಮ ಜರುಗಿಸಲಾಗುವುದು. ಆರೋಗ್ಯ ವಿಷಯದಲ್ಲಿ ಬಡವ ಜೀವದ ಜೊತೆ ಚೆಲ್ಲಾಟವಾಡಬೇಡಿ. ಹಣ ಗಳಿಸಬಹುದು. ಜೀವ ಮತ್ತೆ ಪಡೆಯಲು ಸಾಧ್ಯವಿಲ್ಲ. ವೈದ್ಯರನ್ನು ನಂಬಿ ಬರುವ ರೋಗಿಗಳು ಮತ್ತು ಅವರ ಸಂಬಂಧಿಗಳೊಂದಿಗೆ ಸೌಜನ್ಯಯುತವಾಗಿ ನಡೆದುಕೊಂಡು ಚಿಕಿತ್ಸೆ ನೀಡಬೇಕು. ದುರ್ವರ್ತನೆಗಳನ್ನು ಯಾರೂ ಸಹಿಸುವುದಿಲ್ಲ. ಆಸ್ಪತ್ರೆಗಳಲ್ಲಿ ನೇಮಕಗೊಂಡ ವೈದ್ಯ ಮತ್ತು ಸಿಬ್ಬಂದಿಗಳ ಕಾರ್ಯನಿರ್ವಹಿಸಬೇಕು. ಅನೇಕ ಆಸ್ಪತ್ರೆಗಳಲ್ಲಿ ರಿಜಿಸ್ಟ್ರಾರ್‌ನಲ್ಲೆ ನಮೂದನೆ ಮಾಡುತ್ತಿಲ್ಲ. ಸಿಬ್ಬಂದಿ ಬದಲಾದರೂ ಅವರ ಹೆಸರಲ್ಲೇ ಬೇರೊಬ್ಬರು ಕೆಲಸ ಮಾಡುತ್ತಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ. ನಿತ್ಯ ಕೆಲಸ ಮಾಡುವವರು ರಿಜಿಸ್ಟ್ರಾರ್‌ನಲ್ಲಿ ಸಹಿ ಇರಬೇಕು. ಸಿಬ್ಬಂದಿಗಳ ಬಯೋಮೆಟ್ರಿಕ್ ಹಾಜರಿ ಕಡ್ಡಾಯಗೊಳಿಸಬೇಕು ಆರೋಗ್ಯ ವಿಚಾರದಲ್ಲಿ ರಾಜಿ ಇಲ್ಲ ಎಂದು ಖಡಕ್ ಸಂದೇಶ ನೀಡಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಮಾತನಾಡಿ, ವೈದ್ಯರನ್ನು ದೇವರ ಸಮಾನ ಎಂದು ನಮ್ಮ ಸಮಾಜವು ವೈದ್ಯರಿಗೆ ಗೌರವಯುತ ಸ್ಥಾನ ನೀಡಿದೆ. ಕೆಲವು ವೈದ್ಯರು ಮತ್ತು ಅವರ ಆಸ್ಪತ್ರೆಗಳಲ್ಲಿನ ಸಿಬ್ಬಂದಿ ತೋರುವ ನಿರ್ಲಕ್ಷ್ಯದಿಂದಾಗಿ ಸಾವುಗಳು ಸಂಭವಿಸಿದ್ದರಿಂದ ಇಡೀ ವೈದ್ಯ ಸಮೂಹವನ್ನೇ ಕೆಟ್ಟ ದೃಷ್ಟಿಯಿಂದ ನೋಡುವಂತಾಗುತ್ತದೆ. ಈಗಾಗಲೇ ಅನೇಕ ದೂರುಗಳು ಕೇಳಿಬಂದಿವೆ. ಖಾಸಗಿ ಆಸ್ಪತ್ರೆಗಳಲ್ಲಿ ಯಾರಿಂದಲಾದರೂ ಅನಗತ್ಯವಾಗಿ ಕಿರಿಕಿರಿ, ಹಲ್ಲೆ ನಡೆದರೆ ಕೂಡಲೇ ಸಮೀಪದ ಪೊಲೀಸ್ ಠಾಣೆಗೆ ತಿಳಿಸಿ, ಅಗತ್ಯ ಭದ್ರತೆ ಒದಗಿಸಲಾಗುವುದು ಎಂದರು.

ಡಿಎಚ್‌ಒ ಶಂಕರನಾಯ್ಕ ಮಾತನಾಡಿ, ನೋಂದಣಿ ಸಮಯದಲ್ಲಿ ಯಾವ ವೈದ್ಯರು ಮತ್ತು ಯಾವ ಸಿಬ್ಬಂದಿಯನ್ನು ಡಿಕ್ಲೇರೇಷನ್ ಮಾಡಲಾಗಿರುತ್ತದವೊ ಅದೇ ರೀತಿಯ ವೈದ್ಯರು ಮತ್ತು ಅವಶ್ಯಕ ಸಿಬ್ಬಂದಿಯನ್ನು ಆಸ್ಪತ್ರೆಯು ಹೊಂದಿರಬೇಕು. ಇಲ್ಲದಿದ್ದರೆ ಪರವಾನಿಗೆ ರದ್ದುಪಡಿಸಲಾಗುವುದು. ಕೆಪಿಎಂಇ ಕಾಯ್ದೆಯನ್ನು ಉಲ್ಲಂಘಿಸಿರುವುದು ಗೊತ್ತಾದಲ್ಲಿ ಅಂತಹ ಆಸ್ಪತ್ರೆಗಳ ಮೇಲೆ ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗುವುದು. ಆಸ್ಪತ್ರೆಯಲ್ಲಿನ ಬಯೋಮೆಡಿಕಲ್ ತ್ಯಾಜ್ಯವನ್ನು ನಿಯಮಾನುಸಾರ ವಿಲೆಗೆ ಕ್ರಮವಹಿಸದಿದ್ದಲ್ಲಿ ಸಹ ಕ್ರಿಮಿನಲ್ ಮೊಕದ್ದಮೆ ಕಾನೂನು ಕ್ರಮವನ್ನು ಎದುರಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಕೆಪಿಎಂಇ ಕಾಯಿದೆ ಅಡಿಯಲ್ಲಿ ನೋಂದಣಿ ಆಗಿರುವ ಸಂದರ್ಭದಲ್ಲಿ ಖಾಸಗಿ ಆಸ್ಪತ್ರಯ ವೈದ್ಯರು ಹಾಗೂ ಸಿಬ್ಬಂದಿಯ ಹಾಜರಾತಿ ಮತ್ತು ವೇತನದ ವಿವರಗಳನ್ನು ಪರಿಶೀಲಿಸಲು ತಾಲೂಕುಮಟ್ಟದ ತಂಡಗಳನ್ನು ರಚಿಸಿ ಪರಿಶೀಲಿಸಿ ವರದಿಯನ್ನು ಸಲ್ಲಿಸುವಂತೆ ಸಹ ಸಭೆಯಲ್ಲಿ ಸೂಚಿಸಲಾಯಿತು. ಸಭೆಯಲ್ಲಿ ಖಾಸಗಿ ಆಸ್ಪತ್ರೆಗಳ ಐಎಂಎ ಅಧ್ಯಕ್ಷರಾದ ಡಾ.ಶ್ರೀನಿವಾಸ ದೇಶಪಾಂಡೆ ಹಾಗೂ ಜಿಲ್ಲೆಯ ವಿವಿಧ ಖಾಸಗಿ ಆಸ್ಪತ್ರೆಗಳ ವೈದ್ಯರು ಮತ್ತು ಆರೋಗ್ಯ ಇಲಾಖೆಯ ಎಲ್ಲ ಕಾರ್ಯಕ್ರಮ ಅನುಷ್ಠಾನಾಧಿಕಾರಿಗಳು ಮತ್ತು ಇನ್ನಿತರರು ಇದ್ದರು.

### ಕಡ್ಡಾಯವಾಗಿ ಪಾಲಿಸಿ

- ಖಾಸಗಿ ಆಸ್ಪತ್ರೆಯ ಎಲ್ಲಾ ಕೋಣೆಗಳಲ್ಲಿ ಕಡ್ಡಾಯವಾಗಿ ಸಿಸಿಟಿವಿ ಕಡ್ಡಾಯ
- ಆಸ್ಪತ್ರೆಗಳಲ್ಲಿ ಚಿಕಿತ್ಸಾ ದರವನ್ನು ಪ್ರದರ್ಶಿಸಿ ಅದೇ ರೀತಿ ಪಾಲನೆ ಮಾಡಬೇಕು.
- ನಿಗದಿಪಡಿಸಿದ ದರಕ್ಕಿಂತ ಅನವಶ್ಯಕವಾಗಿ ಹೆಚ್ಚಿನ ಹಣ ಪಡೆಯಬಾರದು
- ಘೋಷಣೆಯಲ್ಲಿರುವಂತೆ ಉಪಕರಣಗಳಿರಬೇಕು. ಸಿಬ್ಬಂದಿ ಕಾರ್ಯನಿರ್ವಹಿಸಬೇಕು.

# ಶ್ರೀ ಭಗೀರಥ ಜಯಂತಿ ಆಚರಣೆ



**■ ಹಂಪಿ ಟೈಮ್ಸ್ ಹರಪನಹಳ್ಳಿ**

ಪಟ್ಟಣ ಸೇರಿದಂತೆ ತಾಲೂಕಿನ ವಿವಿಧ ಕಡೆಗಳಲ್ಲಿ ರಾಜಋಷಿ ಶ್ರೀ ಭಗೀರಥ ಜಯಂತಿಯನ್ನು ಆಚರಿಸಲಾಯಿತು. ಪಟ್ಟಣದ ತಾಲೂಕು ಮಿನಿ ವಿಧಾನಸೌಧ ಸಭಾಂಗಣದಲ್ಲಿ ಮಾನ್ಯ ತಸಿಲ್ದಾರ್‌ರಾದ ಗಿರೀಶ್ ಬಾಬು ಇವರ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮ ನಡೆಯಿತು

ತಾಲೂಕಿನ ಉಪ್ಪಾರ ಸಮಾಜದ ಅಧ್ಯಕ್ಷರಾದ ಟಿ.ತಿಮ್ಮಪ್ಪ. ತಾಲೂಕ ಉಪ್ಪಾರ ನೌಕರರ ಸಂಘದ ಅಧ್ಯಕ್ಷರಾದ ಎಂ ರಮೇಶ್ ಶೃಂಗಾರ ತೋಟ. ಉಪಾಧ್ಯಕ್ಷರಾದ ಬಿ.ಕೊಟ್ರೇಶ್. ಖಜಾಂಚಿ ತಿಪ್ಪೇಸ್ವಾಮಿ ಕೆ ಅಂಜಿನಪ್ಪ. ಕಲ್ಯಾಣ ಕರ್ನಾಟಕ ರಾಜ್ಯ ಕಾರ್ಮಿಕ ಇಲಾಖೆಯ ಅಧ್ಯಕ್ಷರಾದ ಕೆ ತಿಮ್ಮಪ್ಪ ತಿಪ್ಪನಾಯಕನಹಳ್ಳಿ ಕಾರ್ಯದರ್ಶಿಯಾದ ಡಿ ಮಂಜಪ್ಪ ಮಾಡ್ಲಗೇರಿ. ಖಜಾಂಚಿಯಾದ ನ್ಯಾಮತಿ ಪರಶುರಾಮಪ್ಪ ಉಪಾಧ್ಯಕ್ಷರಾದ ಮರಿಯಪ್ಪ. ಟಿ. ಮಂಜುನಾಥ ಕೂಲಹಳ್ಳಿ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ. ಡಿ ಗಿರಿರಾಜ, ಉಪಾಧ್ಯಕ್ಷರು, ಡಿ ಕೆಂಚಪ್ಪ ಗಜೇಂದ್ರ, ಶೇಖಪ್ಪ, ಬಣಕಾರ ಹಾಲಪ್ಪ ಯಲ್ಲಾಪುರ, ನಾಗರಾಜ್ ತಾಳೆದಹಳ್ಳಿ, ಶಂಕ್ರನಹಳ್ಳಿ ತಿರುಪತಿ. ಅಂಜಿನಪ್ಪ. ಅರುಣ್ ಕುಮಾರ್. ಹನುಮಂತ, ನಿಂಗಪ್ಪ, ಎಚ್ ಹನುಮಂತ, ಮಂಜುನಾಥ, ಹನುಮಂತ, ಕಾಂತರಾಜ್, ಯೋಗೀಶ, ಫಕೀರಪ್ಪ, ಎಸ್ ಪರಸಪ್ಪಹಾಗೂ ತಾಲೂಕಿನ ವಿವಿಧ ಸಂಘಟನೆಗಳ ಅಧ್ಯಕ್ಷರು ಪದಾಧಿಕಾರಿಗಳು ಹಾಗೂ ಯುವಕರು ಭಾಗವಹಿಸಿ ಅದ್ದೂರಿಯಿಂದ ಕಾರ್ಯಕ್ರಮ ಆಚರಣೆ ಮಾಡಾಲಾಯಿತು.

# ಮಳೆಯಿಂದಾದ ಹಾನಿಗೆ ಪರಿಹಾರ ಪಾವತಿ

**ಡಿಸಿ ದಿವಾಕರ ಹೇಳಿಕೆ | ಮಳೆಯಾಗುವ ಮುನ್ಸೂಚನೆ ಇದ್ದು ಸುರಕ್ಷಿತೆಗೆ ಕ್ರಮವಹಿಸಿ**

**■ ಹಂಪಿ ಟೈಮ್ಸ್ ಹೊಸಪೇಟೆ**

ವಿಜಯನಗರ ಜಿಲ್ಲೆಯಲ್ಲಿ ಮಳೆಯಿಂದಾದ ಜೀವಹಾನಿ, ಜಾನುವಾರು ಪ್ರಾಣ ಹಾನಿ ಪ್ರಕರಣಗಳಿಗೆ ಪರಿಹಾರ ವಿತರಣೆ ಮಾಡಲಾಗಿದೆ ಎಂದು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರು ಆಗಿರುವ ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ ಅವರು ತಿಳಿಸಿದ್ದಾರೆ.



2024ನೇ ಸಾಲಿನಲ್ಲಿ ಮೇ ಮಾಹೆಯಲ್ಲಿ ಜಿಲ್ಲೆಯ ವಿವಿಧೆಡೆ ಉತ್ತಮವಾಗಿ ಮಳೆ ಸುರಿದಿದೆ. ಮೇ 11 ರಂದು ಸರಾಸರಿ 1.38 ಮಿಮಿ., ಮೇ 12ರಂದು ಸರಾಸರಿ 8.12 ಮಿಮಿ ಮತ್ತು ಮೇ 13ರಂದು ಸರಾಸರಿ 11.87 ಮಿಮಿ ಮಳೆ ಆಗಿದ್ದು ಜಿಲ್ಲೆಯ ಎಲ್ಲಾ 18 ಹೋಬಳಿಗಳಲ್ಲಿ ಸಹ ಉತ್ತಮವಾಗಿ ಮಳೆ ಆಗಿರುತ್ತದೆ. ಹೊಸಪೇಟೆ ತಾಲ್ಲೂಕಿನಲ್ಲಿ ಅತೀ ಹೆಚ್ಚು ಮಳೆ ಆಗಿದ್ದು, 26.92 ಮಿಮೀ ಮಳೆ ಸುರಿದಿದೆ.

**ಅಂದಾಜು 188 ಹೆಕ್ಟೇರ್‌ನಷ್ಟು ತೋಟಗಾರಿಕಾ ಬೆಳೆಗಳಿಗೆ ಹಾನಿ:** ಈ ಮಳೆಗೆ ಹೊಸಪೇಟೆ, ಕಮಲಾಪುರ ಹೋಬಳಿಗಳಲ್ಲಿ ತೋಟಗಾರಿಕಾ ಬೆಳೆಗಳಾದ ಬಾಳೆ, ಪಪ್ಪಾಯ, ವೀಳ್ಯದೆಲೆ ಬೆಳೆಗಳು ಹಾನಿಯುಂಟಾಗಿರುವುದಾಗಿ ತೋಟಗಾರಿಕಾ ಇಲಾಖೆಯ ಅಧಿಕಾರಿಗಳು ವರದಿಯನ್ನು ಸಲ್ಲಿಸಿರುತ್ತಾರೆ. ಜಿಲ್ಲೆಯಲ್ಲಿ ಅಂದಾಜು 188 ಹೆಕ್ಟೇರ್‌ನಷ್ಟು ತೋಟಗಾರಿಕಾ ಬೆಳೆಗಳು ನಾಶವಾಗಿರುತ್ತವೆ. ಈ ಬೆಳೆನಷ್ಟಕ್ಕೆ ಎಸ್.ಡಿ.ಆರ್.ಎಫ್ ನಿಯಮಾನುಸಾರ ಮುಂದಿನ ದಿನಗಳಲ್ಲಿ ಬೆಳೆಹಾನಿ ಆ್ಯಪ್‌ನಲ್ಲಿ ದಾಖಲಿಸಿ ನಿಯಮಾನುಸಾರ ಬೆಳೆ ಹಾನಿ ಪರಿಹಾರ ನೀಡಲಾಗುವುದು.

**ಜೀವಹಾನಿ ಪರಿಹಾರ ಪಾವತಿ:** ಜಿಲ್ಲೆಯಲ್ಲಿ ಏಪ್ರಿಲ್ ತಿಂಗಳಿನ ಅಂತ್ಯದಿಂದ ಇಂದಿನವರೆಗೆ ಎರಡು ಜೀವಹಾನಿ ಪ್ರಕರಣಗಳು ದಾಖಲಾಗಿವೆ. ಕೊಟ್ಟೂರು ತಾಲ್ಲೂಕಿನಲ್ಲಿ ಓರ್ವ ವ್ಯಕ್ತಿ ಹಾಗೂ ಹರಪನಹಳ್ಳಿ ತಾಲ್ಲೂಕಿನಲ್ಲಿ ಓರ್ವ ವ್ಯಕ್ತಿ ಮೃತಪಟ್ಟಿರುತ್ತಾರೆ. ಇವರ ಕುಟುಂಬಸ್ಥರಿಗೆ ಈಗಾಗಲೇ ಎಸ್.ಡಿ.ಆರ್.ಎಫ್ ನಿಯಮಾನುಸಾರ ತಲಾ 5 ಲಕ್ಷ ರೂಪಾಯಿಗಳ ಪರಿಹಾರ ವಿತರಣೆ ಮಾಡಲಾಗಿರುತ್ತದೆ.

**ನಿಯಮಾನುಸಾರ ಪರಿಹಾರ:** ಜಿಲ್ಲೆಯಲ್ಲಿ ಒಟ್ಟು 8 ದೊಡ್ಡ ಜಾನುವಾರುಗಳು, 6 ಸಣ್ಣ ಜಾನುವಾರುಗಳು ಮೃತಪಟ್ಟಿದ್ದು ನಿಯಮಾನುಸಾರ ಈ ಜಾನುವಾರುಗಳ ಮಾಲೀಕರಿಗೆ ಪರಿಹಾರ ನೀಡಲಾಗಿರುತ್ತದೆ. ಜಿಲ್ಲೆಯಲ್ಲಿ ಒಟ್ಟು 14 ಮನೆಗಳು ಮಳೆಯಿಂದ ಹಾನಿಗೊಳಗಾಗಿದ್ದು, ನಿಯಮಾನುಸಾರ ಪರಿಹಾರ ವಿತರಣೆ ಮಾಡಲಾಗುತ್ತಿದೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.

**ಸಾರ್ವಜನಿಕರಲ್ಲಿ ಮನವಿ:** ಮುಂಗಾರು ಹಂಗಾಮಿನ ಮಳೆಗಳು ವಿಜಯನಗರ ಜಿಲ್ಲೆಯಲ್ಲಿ ಸಹ ಆರಂಭವಾಗಿ ಕಳೆದ ನಾಲ್ಕೈದು ದಿನಗಳಿಂದ ಜಿಲ್ಲೆಯಲ್ಲಿ ಒಳ್ಳೆಯ ಮಳೆ ಆಗಿರುತ್ತದೆ. ಮುಂದಿನ ದಿನಗಳಲ್ಲಿ ಇದೇ ರೀತಿ ಮಳೆಯಾಗುವ ಮುನ್ಸೂಚನೆಯಿದ್ದು, ಮಳೆ, ಗುಡುಗು-ಸಿಡಿಲು ಆಗುವ ಸಂದರ್ಭದಲ್ಲಿ ಸಾರ್ವಜನಿಕರು ಸಾಧ್ಯವಾದಷ್ಟು ಮನೆಯಿಂದ ಹೊರಬರದಂತೆ ಸೂಕ್ತ ಮುಂಜಾಗ್ರತಾ ಕ್ರಮಗಳನ್ನು ವಹಿಸಬೇಕು ಎಂದು ವಿಜಯನಗರ ಜಿಲ್ಲೆಯ ಸಾರ್ವಜನಿಕರಲ್ಲಿ ಜಿಲ್ಲಾಧಿಕಾರಿಗಳು ಮನವಿ ಮಾಡಿದ್ದಾರೆ.




## ಬೆಳಕಿನ ಹಾದಿ

# ಕೂಡಿ ಬಾಳೋಣ

ಒಂದಾನೊಂದು ಕಾಲದಲ್ಲಿ ಒಂದು ದಟ್ಟವಾದ ಕಾಡು ಇತ್ತು. ಕಾಡಿನ ಮಧ್ಯಭಾಗದ ಮರದಲ್ಲಿ ವಾಸವಾಗಿದ್ದ ಒಂದು ಇರುವೆ ಮತ್ತು ಹಲ್ಲಿ ಸ್ನೇಹಿತರಾಗಿದ್ದರು. ಪ್ರತಿದಿನ ಇಬ್ಬರೂ ಸೇರಿ ತಮ್ಮ ಕಷ್ಟ ಸುಖಗಳನ್ನು ಮಾತನಾಡಿಕೊಳ್ಳುತ್ತಿದ್ದರು. ಇರುವೆ ತನ್ನ ದಣಿವರಿಯದ ಕೆಲಸಕ್ಕಾಗಿ ಇಡೀ ಕಾಡಿಗೆ ಹೆಸರುವಾಸಿಯಾಗಿತ್ತು. ಆದರೆ ಹಲ್ಲಿ ಸೋಮಾರಿಯಾಗಿದ್ದು, ದಿನವಿಡೀ ಕಾಳಹರಣ ಮಾಡುತ್ತಿತ್ತು.



ಹೀಗಿರಲು ಬೇಸಿಗೆಯ ಒಂದು ದಿನದಂದು ಕಾಡಿನಲ್ಲಿ ಸಣ್ಣ ಕಾಳ್ಗಿಚ್ಚು ಕಾಣಿಸಿತು. ಕ್ರಮೇಣವಾಗಿ ಅದು ತನ್ನ ಹಾದಿಯಲ್ಲಿದ್ದ ಎಲ್ಲವನ್ನೂ ಆವರಿಸತೊಡಗಿತು. ಇದರಿಂದ ಕಾಡಿನ ಪ್ರಾಣಿಗಳೆಲ್ಲ ಭಯಭೀತರಾಗಿ ಕಾಡ್ಗಿಚ್ಚಿನಿಂದ ತಪ್ಪಿಸಿಕೊಳ್ಳುವ ದಾರಿ ಹುಡುಕತೊಡಗಿದವು. ಇರುವೆಯು ತನ್ನ ದೂರದೃಷ್ಟಿಯ ಯೋಜನೆಯಿಂದ ನೆಲದಡಿಯಲ್ಲಿ ಮನೆ ಮಾಡಿಕೊಂಡಿತ್ತು. ಅಲ್ಲಿಯೇ ತನ್ನ ಆಹಾರವನ್ನು ಸಂಗ್ರಹಿಸಿಟ್ಟಿತ್ತುಕಾಡ್ಗಿಚ್ಚಿನ ಅಪಾಯವನ್ನು ಗ್ರಹಿಸಿದ ಇರುವೆಯು ಹಲ್ಲಿಗೆ ತನ್ನ ಆಹಾರವನ್ನು ಸಂಗ್ರಹಿಸಲು ಮತ್ತು ಆಶ್ರಯ ಹುಡುಕಿಕೊಳ್ಳಲು ಸಲಹೆ ನೀಡಿತು. ಆದರೆ ಸೋಮಾರಿಯಾದ ಹಲ್ಲಿಯು ಇರುವೆಯ ಮಾತನ್ನು ಕಡೆಗಣಿಸಿತು. ಹಲ್ಲಿಯು ತನ್ನ ಜವಾಬ್ದಾರಿಯಿಂದ ನುಣುಚಿಕೊಂಡಿತು. ನಾನು ಇರುವೆಗಿಂತ ವೇಗವಾಗಿ ಓಡಬಲ್ಲೆ, ನನ್ನ ಚುರುಕುತನವು ನನ್ನನ್ನು ಉಳಿಸುತ್ತದೆ ಎಂಬ ವಿಶ್ವಾಸ ಹಲ್ಲಿಗೆ ಇತ್ತು.

ಕಾಡ್ಗಿಚ್ಚಿನ ಜ್ವಾಲೆಗಳು ಎಲ್ಲೆಡೆ ವೇಗವಾಗಿ ಹರಡತೊಡಗಿದವು. ಕಾಡಿನ ಪ್ರಾಣಿಗಳೆಲ್ಲ ಜೀವಭಯದಿಂದ ತತ್ತರಿಸಿದವು. ಕೆಲವು ಕಾಡಿನಿಂದ ದೂರ ಓಡಿಹೋದವು. ಓಡಲಾರದ ಜೀವಿಗಳು ಬೆಂಕಿಗೆ ಆಹುತಿಯಾದವು. ಬೆಂಕಿಯು ಇರುವೆ ಮತ್ತು ಹಲ್ಲಿ ವಾಸವಿದ್ದ ಮರಕ್ಕೂ ವ್ಯಾಪಿಸಿತು. ಇರುವೆಯು ತನ್ನ ನೆಲದಡಿಯ ಬಿಲಕ್ಕೆ ಓಡಿಹೋಗಿ ಸುರಕಿತವಾಗಿತ್ತು. ಬೆಂಕಿಯ ಜ್ವಾಲೆ ಮತ್ತು ಹೊಗೆಯಿಂದ ತನ್ನ ಜೀವವನ್ನು ಕಾಪಾಡಿಕೊಂಡಿತು. ಆದರೆ ಮರದ ಮೇಲಿದ್ದ ಹಲ್ಲಿ ಜೀವ ಉಳಿಸಿಕೊಳ್ಳಲು ಪರಿತಪಿಸಿತು. ಅದಕ್ಕಾಗಿ ಎಲ್ಲೆಲ್ಲೋ ಅಲೆದಾಡಿತು. ಆದರೆ ತುಂಬಾ ತಡವಾಗಿತ್ತು. ಬೆಂಕಿಯು ಎಲ್ಲೆಡೆ ಹರಡುತ್ತಲೇ ಇತ್ತು. ಹಲ್ಲಿಯು ಮರದಿಂದ ಮರಕ್ಕೆ ಓಡುತ್ತಾ, ಜಿಗಿಯುತ್ತಾ ಜೀವ ಉಳಿಸಿಕೊಳ್ಳಲು ಹರಸಾಹಸ ಮಾಡಿತು.

ಕಾಡಿನ ಬೆಂಕಿಯು ಕ್ರಮೇಣವಾಗಿ ಅಲ್ಲಿದ್ದ ಎಲ್ಲಾ ಮರಗಳನ್ನೂ ಸಟ್ಟು ಭಸ್ಮ ಮಾಡಿತ್ತು. ಬೆಂಕಿ ತಣ್ಣಗಾದ ನಂತರ ತನ್ನ ಬಿಲದಿಂದ ಹೊರಬಂದ ಇರುವೆಯು ತನ್ನ ಸ್ನೇಹಿತನಿಗಾಗಿ ಹುಡುಕಾಡಿತು. ಎಲ್ಲೂ ಸ್ನೇಹಿತನ ಸುಳಿವು ಸಿಗಲಿಲ್ಲ. ಖಂಡಿತ ಬೆಂಕಿಗೆ ಆಹುತಿಯಾಗಿರಬೇಕೆಂದು ಭಾವಿಸಿತು. ಕೊನೆಗೆ ಒಂದು ದಪ್ಪನಾದ ಮರದ ಬುಡದಲ್ಲಿ ತನ್ನ ಗೆಳೆಯ ಹಲ್ಲಿ ಪ್ರಜ್ಞೆ ತಪ್ಪಿ ಬಿದ್ದಿರುವುದು ಕಂಡುಬಂತು. ಕೂಡಲೇ ಅಲ್ಲಿಗೆ ಬಂದು ಗೆಳೆಯನನ್ನು ಅಲುಗಾಡಿಸಿತು. ಎದೆಗೆ ಕಿವಿಗೊಟ್ಟು ಆಲಿಸಿತು. ಇನ್ನೂ ಜೀವ ಇದೆ ಎಂಬುದು ತಿಳಿದು ಸಂತೋಷವಾಯಿತು. ಕೂಡಲೇ ತನ್ನ ಬಿಲಕ್ಕೆ ತೆರಳಿ ತನ್ನ ಮೀಸೆಯಲ್ಲಿ ನೀರಿನ ಒಂದು ಹನಿಯನ್ನು ತಂದು ಹಲ್ಲಿಯ ಮುಖಕ್ಕೆ ಹಾಕಿತು. ಆಗ ಹಲ್ಲಿಯು ನಿಧಾನವಾಗಿ ಕಣ್ಣಿ ತೆರೆಯಿತು. ಗೆಳೆಯನನ್ನು ನೋಡಿ ಸಂತಸವಾಯಿತು. ಇರುವೆ ಹಲ್ಲಿಯನ್ನು ತನ್ನ ಬಿಲಕ್ಕೆ ಕರೆದೊಯ್ದು ಉಪಚಾರ ಮಾಡಿತು. ತಿನ್ನಲು ಆಹಾರ ನೀಡಿತು. ಕಷ್ಟದಲ್ಲಿದ್ದ ಗೆಳೆಯನ ಪ್ರಾಣವನ್ನು ರಕ್ಷಿಸಿತ್ತು.

ಅಂದಿನಿಂದ ಹಲ್ಲಿಯು ಸಾಧ್ಯವಾದಾಗಲೆಲ್ಲ ಆಹಾರ ಹುಡುಕುವ ಕೆಲದಲ್ಲಿ ತೊಡಗಿಕೊಂಡಿತು. ಅಪಾಯ ಇದೆ ಎಂಬುದನ್ನು ಅರಿತ ಕೂಡಲೇ ಅಲ್ಲಿಂದ ತಪ್ಪಿಸಿಕೊಳ್ಳುವ ಪ್ರಯತ್ನ ಮಾಡತೊಡಗಿತು. ದೀಢೀರ್ ಅಪಾಯ ಎದುರಾದಾಗ ಬಾಲವನ್ನು ಕಳೆದುಕೊಂಡು ಜೀವ ಉಳಿಸಿಕೊಳ್ಳುವ ಪ್ರಯತ್ನದಲ್ಲಿ ಯಶಸ್ವಿಯಾಯಿತು. ಅಂದಿನಿಂದ ಇಬ್ಬರೂ ಸ್ನೇಹಿತರಾದರು. ನಮ್ಮ ಜೀವನದಲ್ಲೂ ಸಹ ಕಷ್ಟಗಳು ಹೇಳದೇ ಬರಬಹುದು. ಅವುಗಳನ್ನು ಎದುರಿಸುವ ಚತುರತೆ ನಮ್ಮಲ್ಲಿರಬೇಕು. ಅಂತೆಯೇ ಕಷ್ಟದಲ್ಲಿರುವ ನಮ್ಮ ಸ್ನೇಹಿತರನ್ನು ಕಾಪಾಡುವ ಮನೋಭಾವ ಬೆಳೆಸಿಕೊಳ್ಳಬೇಕು.

**– ವೀರೇಂದ್ರ. ಎಸ್.ಪಿ.**
9ನೇ ತರಗತಿ. ಕೇಂದ್ರೀಯ ವಿದ್ಯಾಲಯ. ದಾವಣಗೆರೆ

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ. **ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ-ಮೇಲ್:hampitimes@gmail.com
M: 9448633038

**ಹಂಪಿ ಟೈಮ್ಸ್**
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

# ದಾಷ್ಟಿಕತೆ ಮತ್ತು ನಮ್ರತೆ



ಅದೊಂದು ಬೃಹತ್ತಾದ ಕಾಡು. ಅ ಕಾಡಿನ ಹಾದಿಯಾಗಿ ಸುತ್ತು ಹಾಕಿ ಬಸವಳಿದು ಬಾಯಾರಿದ ಆ ವ್ಯಕ್ತಿ ಕಾಡಂಚಿನ ಊರಿಗೆ ಬಂದು ತಲುಪಿದ. ಊರ ಹೊರಗಿನ ಬಾವಿಯಲ್ಲಿ ನೀರು ಸೇದುತ್ತಿದ್ದ ಓರ್ವ ಮಹಿಳೆಯನ್ನು ಕಂಡು ತನಗೆ ತುಂಬಾ ಬಾಯಾರಿಕೆಯಾಗಿದ್ದು ಕುಡಿಯಲು ನೀರು ಕೊಡಲು ಕೇಳಿದ. ತಲೆ ಕೂದಲು ನೆರೆತ, ಬೊಚ್ಚು ಬಾಯಿಯ ಆ ವೃದ್ಧ ಹೆಣ್ಣು ಮಗಳು "ನೀರನ್ನು ನಾನು ಕೊಡುವೆ, ಆದರೆ ನಿನ್ನ ಪರಿಚಯವನ್ನು ಹೇಳು" ಎಂದಳು.

ಆ ಕಾಲದ ಅತ್ಯಂತ ಪ್ರಸಿದ್ಧ ಕವಿ ಮತ್ತು ವಿದ್ವಾಂಸನಾಗಿದ್ದ ಆ ವ್ಯಕ್ತಿ ತನ್ನ ಪರಿಚಯ ಹೇಳಿದರೆ ತಿಳಿದುಕೊಳ್ಳುವಷ್ಟು ಯೋಗ್ಯತೆ ಆ ವೃದ್ಧ ಹಳ್ಳಿಯ ಹೆಣ್ಣುಮಗಳಲ್ಲಿ ಇಲ್ಲ ಎಂದುಕೊಂಡು "ನಾನು ಓರ್ವ ಪಥಿಕ, ಈ ದಾರಿಯ ಮೂಲಕ ಮುಂದಿನ ಊರಿಗೆ ಹೋಗುತ್ತಿರುವ ದಾರಿಹೋಕ" ಎಂದು ಹೇಳಿದನು. ಇದೀಗ ವೃದ್ಧ ಹೆಣ್ಣು ಮಗಳು ಮೆಲುವಾಗಿ ನಕ್ಕು ಈ ಪ್ರಪಂಚದಲ್ಲಿ ಕೇವಲ ಇಬ್ಬರೇ ಪಥಿಕರಿರುವುದು ಸೂರ್ಯ ಮತ್ತು ಚಂದ್ರ. ಅವರಿಬ್ಬರೂ ಪ್ರತಿದಿನ ಪೂರ್ವದಲ್ಲಿ ಹುಟ್ಟಿ ಪಶ್ಚಿಮದಲ್ಲಿ ಮುಳುಗುವರು, ಅದೆಷ್ಟೇ ಎಡರು ತೊಡರುಗಳು ಬಂದರೂ ತಮ್ಮ ಕರ್ತವ್ಯವನ್ನು ನಿರ್ವಹಿಸುವವರು ಅವರಿಬ್ಬರೇ..... ನೀನು ಪಥಿಕನಲ್ಲ.... ಆದ್ದರಿಂದ ನೀನು ಯಾರು ಎಂಬುದನ್ನು ಸರಿಯಾಗಿ ಹೇಳು ಎಂದು ಹೇಳಿದಳು.

ಹಾಗಾದರೆ ನಾನು ಅತಿಥಿ ಎಂದು ತಿಳಿದುಕೋ ಎಂದು ಆ ವಿದ್ವಾಂಸನು ಮಾರುತ್ತರ ನೀಡಿದನು. ಅದಕ್ಕೆ ಆ ವೃದ್ದೆಯು ಈ ಜಗತ್ತಿನಲ್ಲಿ ಅತಿಥಿಗಳು ಕೇವಲ ಇಬ್ಬರೇ. ಯೌವನ ಮತ್ತು ದುಡ್ಡು. ಅವರಿಬ್ಬರೂ ಶಾಶ್ವತವಲ್ಲ. ಅದೆಷ್ಟೇ ನೀನು ಪ್ರಯತ್ನ ಪಟ್ಟರೂ, ಪೀಡಿಸಿದರೂ ಅವರು ನಿನ್ನ ಬಳಿ ಉಳಿಯುವುದಿಲ್ಲ ಆದ್ದರಿಂದ ನೀನಾರು? ಎಂಬುದನ್ನು ಹೇಳು ಎಂದು ಪ್ರಶ್ನಿಸಿದಳು. ವೃದ್ಧೆಯ ಉತ್ತರದಿಂದ ಚಕಿತನಾದ ವಿದ್ವಾಂಸನು ನಾನು ಒಬ್ಬ ತಾಳ್ಮೆಯುಳ್ಳ ವ್ಯಕ್ತಿ ಎಂದು ಉತ್ತರಿಸಿದನು. ಮತ್ತೆ ಮೆಲು ನಕ್ಕ ವೃದ್ಧ ಹೆಣ್ಣು ಮಗಳು ನೀನು ಅಷ್ಟೊಂದು ತಾಳ್ಮೆಯುಳ್ಳ ವ್ಯಕ್ತಿ ಎಂದು ನನಗೆ ಅನ್ನಿಸುತ್ತಿಲ್ಲ. ಈ ಪ್ರಪಂಚದಲ್ಲಿ ಭೂಮಿ ತಾಯಿ ಮತ್ತು ಗಿಡಮರಗಳು ಮಾತ್ರ ತಾಳ್ಮೆಯನ್ನು ಹೊಂದಿವೆ. ಈ ಭೂಮಿ ತಾಯಿ ನಮ್ಮ ಅದೆಷ್ಟೋ ಅತ್ಯಾಚಾರಗಳನ್ನು ಸಹಿಸಿ ನಮ್ಮನ್ನು ಮಗುವಿನಂತೆ ಪೊರೆಯುತ್ತಾಳೆ... ಇನ್ನು ಗಿಡ ಮರಗಳು ತಮ್ಮ ಬದುಕಿನುದ್ದಕ್ಕೂ ನಮಗೆ ನೆರಳು, ಹಣ್ಣು ಹೂಗಳನ್ನು ಕೊಡುತ್ತವೆ.... ನಾವು ಕಲ್ಲೆಸೆದಾಗ್ಯೂ ಕೂಡ. ಈಗ ಹೇಳು ನೀನ್ಯಾರು ಎಂದು? ಎಂದು ಪ್ರಶ್ನಿಸಿದಳು.

ಈಗಾಗಲೇ ಬಾಯಾರಿ ಬಸವಳಿದಿದ್ದ ಆ ವ್ಯಕ್ತಿ ಕೊಂಚ ಅಸಹನೆ ಯಿಂದಲೇ ಹಾಗಾದರೆ ನನ್ನನ್ನು ಓರ್ವ ಮೊಂಡ ಎಂದು ತಿಳಿದು ಕೊಂಡು ನೀರು ಹನಿಸಿ ಪುಣ್ಯ ಕಟ್ಟಿಕೋ ಎಂದು ಹೇಳಿದನು. ನಸುನಗುತ್ತಾ ಆ ವೃದ್ದ ಹೆಣ್ಣು ಮಗಳು ಈ ಜಗತ್ತಿನಲ್ಲಿ ಕೇವಲ ಎರಡು ವಸ್ತುಗಳಲ್ಲಿ ಮೊಂಡತನವಿದೆ. ಅವು ಕೂದಲು ಮತ್ತು ಉಗುರುಗಳು. ಅದೆಷ್ಟೇ ಕತ್ತರಿಸಿದರೂ ಮತ್ತೆ ಮತ್ತೆ ಬೆಳೆಯುವ ಕೂದಲು ಮತ್ತು ಉಗುರುಗಳಷ್ಟು ಮೊಂಡು ತನ ಬೇರೆ ಯಾವುದೇ ವಸ್ತುಗಳಿಗೆ ಇಲ್ಲ. ಈಗ ಹೇಳು ನೀನು ಯಾರು?? ಎಂದು ಮತ್ತೆ ಆಕೆ ಕೇಳಿದರು. ಬಾಯಾರಿಕೆಯಿಂದ ಬಳಲಿದ್ದ ಆ ದಾರಿಹೋಕ ತುಸು ಅಸಹನೆಯಿಂದಲೇ ನಿನ್ನನ್ನು ನೀರು ಕೇಳುತ್ತಿರುವ ನಾನು ಒಬ್ಬ ಮೂರ್ಖ ಎಂದು ತಿಳಿದುಕೋ ಎಂದು ಕೊಂಚ ಸಿಡುಕುತ್ತಲೇ ಹೇಳಿದನು.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Hampi Times E-paper
SCAN AND READ

ಮತ್ತೆ ಆ ವೃದ್ಧ ಮಹಿಳೆ ಈ ಜಗತ್ತಿನಲ್ಲಿ ಮೂರ್ಖರು ಕೇವಲ ಇಬ್ಬರು ಇದ್ದಾರೆ. ಯಾವುದೇ ಯೋಗ್ಯತೆಗಳು ಇಲ್ಲದೆ ತನ್ನ ಹಿರಿಯರಿಂದ ಬಳುವಳಿಯಾಗಿ ಬಂದ ರಾಜ್ಯವನ್ನು ಆಳುತ್ತಿರುವ ರಾಜ ಮತ್ತು ಆ ರಾಜನನ್ನು ಹೊಗಳಿ ಹೊನ್ನಶೂಲಕ್ಕೆ ಏರಿಸುವ ಮಂತ್ರಿ. ಅದೆಷ್ಟೇ ಅಭಿವೃದ್ಧಿ ಹೊಂದಿದ ರಾಜ್ಯವಾದರೂ ಅದರ ಅವನತಿಗೆ ಒಬ್ಬ ಮೂರ್ಖ ರಾಜ ಮತ್ತು ಓರ್ವ ಮೂರ್ಖ ಮಂತ್ರಿ ಕಾರಣರಾಗುತ್ತಾರೆ ಎಂದರೆ ನೀನು ನಂಬಲಿಕ್ಕಿಲ್ಲ.ಈಗ ಹೇಳು ನೀನ್ಯಾರು? ಎಂದು ಮತ್ತೆ ಕೇಳಿದಳು.

ಇದೀಗ ಆ ವಿದ್ವಾಂಸನ ಕಣ್ತೆರೆದಂತಾಯಿತು. ಓರ್ವ ಹಳ್ಳಿಯ ಏನು ಅರಿಯದವಳು ಎಂದುಕೊಂಡ ಅನಕ್ಷರಸ್ಥ ಹೆಣ್ಣು ಮಗಳ ಜಾಣ್ಮೆ ಮತ್ತು ತಿಳುವಳಿಕೆಯನ್ನು ಕಂಡು ಆತನಿಗೆ ಆಶ್ಚರ್ಯವಾಗುವುದರ ಜೊತೆ ಜೊತೆಗೆ ತನ್ನ ಅರಿವಿನ ಕುರಿತಾದ ಹೆಮ್ಮೆ ಕರಗಿಹೋಯಿತು. ಕೂಡಲೇ ನತಮಸ್ತಕನಾದ ಆ ವಿದ್ವಾಂಸನು ಆಕೆಯ ಕಾಲುಗಳಿಗೆರಗಿ "ಅಮ್ಮಾ, ನನ್ನನ್ನು ಕ್ಷಮಿಸಿಬಿಡು. ನಾನು ಓರ್ವ ವಿದ್ವಾಂಸ ಎಂಬ ಹಮ್ಮಿನಲ್ಲಿದ್ದೆ. ನನ್ನ ಪಾಂಡಿತ್ಯವು ನನ್ನ ಕಣ್ಣುಗಳಿಗೆ ಅಹಂಕಾರದ ಪೊರೆಯನ್ನು ಉಂಟು ಮಾಡಿತ್ತು. ಆದ್ದರಿಂದಲೇ ಜಗತ್ತಿನ ಉಳಿದೆಲ್ಲರೂ ನನ್ನ ಪಾಲಿಗೆ ನಗಣ್ಯರೆನಿಸಿದ್ದರು. ಇದೀಗ ನೀನು ನನ್ನ ಕಣ್ಣು ತೆರೆಸಿದೆ. ನನ್ನನ್ನು ಕ್ಷಮಿಸಿ ಬಿಡು ತಾಯಿ.... ದಯವಿಟ್ಟು ನೀರು ಹನಿಸಿ ಪುಣ್ಯಕಟ್ಟಿಕೋ" ಎಂದು ಆಕೆಯ ಪಾದಗಳಿಗೆ ಎರಗಿದನು.

ಆದರೆ ಏನಾಶ್ಚರ್ಯ!!! ಹಾಗೆ ಕಾಲುಗಳಿಗೆರಗಿದ ವಿದ್ವಾಂಸನನ್ನು ಭುಜ ಹಿಡಿದು ಮೇಲೆತ್ತಿದ ಆ ತಾಯಿಯನ್ನು ನೋಡಿದ ಆ ವಿದ್ವಾಂಸನ ಬಾಯಿಂದ ಮಾತುಗಳೇ ಹೊರಡಲಿಲ್ಲ.... ಕಾರಣ ಹಾಗೆ ಮೇಲೆತ್ತಿದಾಗ ಆತ ಕಂಡದ್ದು ವಿದ್ಯೆ ಮತ್ತು ಜಾಣ್ಮೆಯ ಅಧಿದೇವತೆ ಸಾಕ್ಷಾತ್ ಸರಸ್ವತಿ ದೇವಿಯನ್ನು. ಅಪ್ರತಿಭನಾಗಿ ಮತ್ತೊಮ್ಮೆ ಆಕೆಯ ಕಾಲಿಗೆರಗಿದ ಆತನನ್ನು ಕುರಿತು ಆಕೆ ಹೀಗೆ ಹೇಳಿದಳು

"ಕಂದ, ನಿನ್ನನ್ನು ನೀನು ಅರಿತರೆ ಮಾತ್ರ ನೀನು ಓರ್ವ ಮನುಷ್ಯನಾಗುವೆ. ಅಹಂಕಾರದ ಪೊರೆ ನಿನ್ನ ಜ್ಞಾನ ಚಕ್ಷುಗಳನ್ನು ಮುಚ್ಚಿ ಹಾಕಿತ್ತು. ನಿನ್ನ ಮಾನವೀಯತೆಯ ಮುಖ ಪ್ರಕಟವಾಗುವುದು ನೀನು ಕೇವಲ ವಿದ್ಯಾವಂತನಾಗಿದ್ದರೆ ಅಲ್ಲ ಆ ವಿದ್ಯೆಯೊಂದಿಗೆ ವಿನಯವು ಕೂಡ ಮಿಳಿತವಾಗಿರಬೇಕು"

ವಿದ್ಯೆಗೆ ವಿನಯವೇ ಭೂಷಣ ಎಂಬುದರ ಅರಿವು ಮೂಡಿಸಲೆಂದೇ ನಾನಿಲ್ಲಿ ಬಂದದ್ದು ಎಂದು ವಿದ್ಯಾದಾತೆ ಹೇಳಿದಾಗ ಆ ವಿದ್ವಾಂಸನು ತಲೆತಗ್ಗಿಸಿ ಆಕೆಗೆ ತನ್ನನ್ನು ಕ್ಷಮಿಸು ಎಂದು ಆಗ್ರಹಿಸಿದನು. ಪ್ರೀತಿನಿಂದ ಆತನ ತಲೆಯನ್ನು ಸವರಿ ವಿನಮ್ರತೆಯ ಪಾಠವನ್ನು ಹೇಳಿದ ಆ ವೃದ್ಧ ಮಾತೆ ಸಾಕ್ಷಾತ್ ಸರಸ್ವತಿ ದೇವಿ ಮತ್ತು ಹಾಗೆ ಆಕೆಯ ಬಳಿ ಕ್ಷಮೆ ಕೇಳಿದ ಆ ಮಹಾನ್ ವಿದ್ವಾಂಸನೆ ಸಂಸ್ಕೃತದ ಅತಿ ದೊಡ್ಡ ವಿದ್ವಾಂಸ, ಬೋಜರಾಜನ ಸ್ನೇಹಿತ, ಶಾಕುಂತಲ, ಮೇಘದೂತ ಮುಂತಾದ ಬೃಹತ್ ಕೃತಿಗಳನ್ನು ರಚಿಸಿದ ಕವಿರತ್ನ ಎಂದೆ ಹೆಸರಾದ ಮಹಾನ್ ಕವಿ ಕಾಳಿದಾಸ.

# ಬೇಸಿಗೆ ರಜೆಯ ಆ ದಿನಗಳು

ನಮ್ಮ ಬೇಸಿಗೆರಜೆಯ ಬಾಲ್ಯದ ನೆನಪುಗಳು ಮನದಲ್ಲಿ ಅಚ್ಚಳಿಯದೇ ಉಳಿದಿವೆ. ಇದಕ್ಕೆ ಕಾರಣ ಯಾವುದೇ ಭಯ, ಆತಂಕಗಳಿಲ್ಲದ ಸ್ವಚ್ಛಂದ ವಾತಾವರಣದಲ್ಲಿ ರಜೆಯ ದಿನಗಳು ಅರಳುತ್ತಿದ್ದವು. ಯಾವುದೇ ನಿರ್ಬಂಧಗಳು ಇಲ್ಲದಿದ್ದರೂ ನಾವು ಅತ್ಯಂತ ಸುರಕ್ಷಿತವಾಗಿರುತ್ತಿದ್ದೆವು. ಸ್ನೇಹಿತರು, ಬಂಧುಬಾಂದವರೊಡನೆ ಉತ್ತಮ ಬಾಂಧವ್ಯ ಹೊಂದಿರುತ್ತಿದ್ದೆವು.



ಬೇಸಿಗೆ ರಜೆ ಬಂತೆಂದರೆ ಬಾಲ್ಯದಲ್ಲಿ ನಾವು ಪ್ರಕೃತಿಯ ಶಿಶುಗಳೇ ಆಗುತ್ತಿದ್ದೆವು.ಹಚ್ಚ ಹಸಿರಿನ ಮಲೆನಾಡಿನ ಮಕ್ಕಳಾದ ನಮಗೆ ರಜೆಯ ಆಟಗಳನ್ನು ಆಡಲು ಮರಗಿಡಬಳ್ಳಿಗಳೇ ಆಟಿಕೆಗಳಾಗಿದ್ದವು. ಬೇಸಿಗೆಯಲ್ಲಿ ಮನೆಯ ಹಿಂದಿನ ಕಾಡು ಸುತ್ತುವುದೇ ನನ್ನ ಮತ್ತು ಗೆಳತಿಯರ ಅಚ್ಚುಮೆಚ್ಚಿನ ಆಟವಾಗಿತ್ತು. ಬೇಸಿಗೆಯಲ್ಲಿ ಸಿಗುವ ವಿವಿಧ ಕಾಡುಹಣ್ಣುಗಳನ್ನು ಹುಡುಕಿ ಮರಗಿಡವೇರಿ ಕೊಯ್ಯುವುದು,ಮರದ ಪ್ರಾಕೃತಿಕ ಜೋಕಾಲಿಗಳಲ್ಲಿ ಆಡುವುದು ಅದೆಷ್ಟು ಮಧುರವಾಗಿತ್ತು.

ಅಡುಗೆ ಆಟಕ್ಕೆ ಬೇರೆ ಬೇರೆ ರೀತಿಯ ಎಲೆಗಳನ್ನು ಸಂಗ್ರಹಿಸಿ, ಅವುಗಳಿಂದ ಬಗೆ ಬಗೆಯ ಅಡುಗೆಗಳನ್ನು ಮಾಡಿಟ್ಟು ನೋಡಿ ಸಂತಸಪಡುತ್ತಿದ್ದೆವು.ಪಗಡೆಯಾಟ, ಚೆನ್ನೆಮಣೆ, ಲಗೋರಿ, ಕಣ್ಣಾಮುಚ್ಚಾಲೆ, ಕುಂಟೋಬಿಲ್ಲೆ ಒಂದಕ್ಕಿಂತ ಒಂದು ಚಂದದ ಆಟಗಳನ್ನು ಆಡಿ ನಲಿಯುತ್ತಿದ್ದೆವು. ಅಜ್ಜಿಮನೆ, ದೊಡ್ಡಮ್ಮ, ಚಿಕ್ಕಮ್ಮನ ಮನೆ ಎಂದು ರಜೆ ಪೂರ್ತಿ ನೆಂಟರ ಮನೆಗಳಿಗೆ ಹೋಗಿ ಅಜ್ಜ ಅಜ್ಜಿಯ ಪ್ರೀತಿಯನ್ನು ಸವಿಯುತ್ತಾ, ಅಣ್ಣ, ಅಕ್ಕಂದಿರೊಂದಿಗೆ ಊರೂರು ಸುತ್ತಿ ಕಾಲ ಕಳೆಯುತ್ತಿದ್ದೆವು. ಹಳ್ಳಕೊಳ್ಳಗಳಲ್ಲಿ ನೀರಾಟವಾಡಿ ಮನದಣಿಯೇ ಕುಣಿಯುತ್ತಿದ್ದೆವು. ಅಜ್ಜನ ಮನೆಯ ವಿಶಾಲವಾದ ಮಧ್ಯಮನೆಯಲ್ಲಿ ಎಲ್ಲರೂ ಒಟ್ಟಾಗಿ ಹಾಸಿಗೆ ಹಾಸಿಕೊಂಡು ಮಲಗುತ್ತಿದ್ದೆವು. ರಾತ್ರಿ ಎಷ್ಟೋ ಹೊತ್ತಿನವರೆಗೆ ಮುಗಿಯದ ಮಾತುಕತೆ ಗಳಲ್ಲಿ ಮುಳುಗುತ್ತಿದ್ದೆವು.ಅಜ್ಜಿ ಹೇಳುವ ಕತೆಗಳನ್ನು ಕೇಳುತ್ತಾ ಕಲ್ಪನಾ ಲೋಕದಲ್ಲಿ ವಿಹರಿಸುತ್ತಿದ್ದೆವು.



ಭವ್ಯ ಟಿ.ಎಸ್. ಶಿಕ್ಷಕಿ
ಹೊಸನಗರ, ಶಿವಮೊಗ್ಗ

Hampi Times E-paper
SCAN AND READ

ಬೇಸಿಗೆ ರಜೆ ಇಂದು ಇಂದು ಅವಿಭಕ್ತ ಕುಟುಂಬಗಳು ಹೆಚ್ಚಾಗಿರುವುದರಿಂದ ಮನೆಯಲ್ಲಿ ಒಬ್ಬರು ಇಬ್ಬರು ಮಕ್ಕಳಿದ್ದು ಅವರು ಬೇಸಿಗೆ ರಜೆಯಲ್ಲಿ ಎಲ್ಲಿಯೂ ಹೋಗದೆ ಮನೆಯಲ್ಲೇ ಇರುವುದು ಕಂಡುಬರುತ್ತದೆ. ಇದಕ್ಕೆ ಕಾರಣ ಅಪ್ಪ ಅಮ್ಮನೊಂದಿಗೆ ಮಾತ್ರ ಬೆಳೆದ ಮಕ್ಕಳು ಬಂಧುಗಳ ಮನೆಗೆ ಹೋಗಿ ಅಲ್ಲಿ ಹೊಂದಿಕೊಳ್ಳುವ ಸಮಸ್ಯೆ ಉಂಟಾಗುವುದು.

ಕುಟುಂಬಗಳ ನಡುವೆ ಸಾಮರಸ್ಯ ಮೊದಲಿನಂತೆ ಇಲ್ಲದಿರುವುದು ಇನ್ನೊಂದು ಕಾರಣ.ಇದರಿಂದಾಗಿ ಮಕ್ಕಳಿಗೆ ಬೇಸಿಗೆ ರಜೆ ಎಂದರೆ ನಾಲ್ಕು ಗೋಡೆಗಳ ನಡುವಿನ ಸಜೆಯೇ ಆಗಿದೆ.ಇನ್ನೂ ಉದ್ಯೋಗಸ್ಥ

ತಂದೆ ತಾಯಿಗೆ ಮಕ್ಕಳೊಂದಿಗೆ ಕಾಲ ಕಳೆಯಲು ಸಮಯವಿಲ್ಲದೆ ಅವರು ಸದಾ ಕಾಲ ಟಿ.ವಿ.,ಮೊಬೈಲ್ ಗಳಲ್ಲಿ ಮೈ ಮರೆತಿರುತ್ತಾರೆ.ಹೊರಗಡೆ ಹೋಗಿ ಆಟ ಆಡುವುದರಿಂದ ಇಂದಿನ ಮಕ್ಕಳು ವಿಮುಖರಾಗುತ್ತಿದ್ದಾರೆ. ಕಾಂಕ್ರೀಟ್ ಕಾಡುಗಳಂತಿರುವ ಪಟ್ಟಣಗಳಲ್ಲಿ ಪ್ರಕೃತಿವಿಹಾರ ದೂರದ ಮಾತೇ ಆಗಿದೆ.ಮಕ್ಕಳಿಗೆ ರಜೆ ಇರುವಾಗ ದೂರದ ಹಳ್ಳಿಯಲ್ಲಿರುವ ಅಜ್ಜ ಅಜ್ಜಿ ಮನೆಗೆ ಕರೆದುಕೊಂಡು ಹೋಗುವ ಪೋಷಕರ ಸಂಖ್ಯೆ ಸಹ ವಿರಳವೇ ಎನ್ನಬಹುದು.

ಇನ್ನೂ ಇತ್ತೀಚಿನ ಬೇಸಿಗೆ ಶಿಬಿರಗಳು ಮಕ್ಕಳ ರಜೆಯ ಏಕಾಂಗಿ ತನವನ್ನು ನಿವಾರಿಸಿ ಅವರನ್ನು ಅನೇಕ ಚಟುವಟಿಕೆಗಳ ಕಡೆಗೆ ಕರೆದೊಯ್ಯುವ ಪ್ರಯತ್ನ ಮಾಡುತ್ತಿವೆ.ಇವುಗಳಲ್ಲಿ ನೃತ್ಯ, ನಾಟಕ, ಆಟೋಟ, ಚಿತ್ರ ಕಲೆ ಮೊದಲಾದವುಗಳಲ್ಲಿ ಮಕ್ಕಳು ತೊಡಗಿಕೊಳ್ಳುವ ಅವಕಾಶವಿದೆ. ಕೆಲವು ಶಿಬಿರಗಳಲ್ಲಿ ಪ್ರಕೃತಿ ವಿಹಾರಕ್ಕೂ ಮಕ್ಕಳನ್ನು ಕರೆದೊಯ್ಯುತ್ತಾರೆ.

ಏನೇ ಆದರೂ ಇಂದಿನ ಮಕ್ಕಳಿಗೆ ನಮಗಿರುವಂತಹ ಮುಕ್ತ, ನಿರ್ಭಯ, ಸ್ವಚ್ಛಂದ ಬೇಸಿಗೆ ರಜೆ ಸವಿ ಇಲ್ಲವೆಂದೇ ಹೇಳಬಹುದು. ಮಕ್ಕಳನ್ನು ಎಲ್ಲೇ ಕಳಿಸಬೇಕಾದರೂ ಪೋಷಕರು ಇಂದು ಯೋಚಿಸಬೇಕಿದೆ. ಮಕ್ಕಳಿಗೆ ಸಮಯ ಕೊಡಲು ಪೋಷಕರು ಕಷ್ಟ ಪಡಬೇಕಿದೆ. ಮರಳಿ ಬರದ ನಮ್ಮ ಬಾಲ್ಯದ ನೆನಪುಗಳು ನಮ್ಮೊಳಗೇ ಮನೆ ಮಾಡಿ ಕೊಂಡು ಸದಾ ನಮ್ಮನ್ನು ಕಾಡುತ್ತಿರುತ್ತವೆ.

### ಮರಳಿ ಬಾರದ ಓ ನನ್ನ ಬಾಲ್ಯವೇ....

ಮುಚ್ಚುಮರೆಯಿಲ್ಲದೆ
ಬಿಚ್ಚು ಮನದಿಂದ
ಹುಚ್ಚೆದ್ದು ಕುಣಿಕುಣಿವ
ಉಕ್ಕಂದದ ಉತ್ಸಾಹದ
ಬತ್ತದ ತೊರೆ ಬಾಲ್ಯದ ನೆನಪೇ
ಯಾಕಿಷ್ಟು ಕಾಡುತ್ತಿರುವೆ

ಸ್ವಚ್ಛ ಮನದಿಂದ
ನೆಚ್ಚಿನ ಗೆಳೆಯ ಗೆಳತಿಯರೊಡನೆ
ಮೆಚ್ಚಿನಾಟಗಳನಾಡಿ
ಹಚ್ಚ ಹಸಿರಾಗಿ ಎದೆಯೊಳಗೆ
ಬೀಡು ಬಿಟ್ಟ ಓ ನನ್ನ ಪ್ರಿಯ ಬಾಲ್ಯವೇ
ಯಾಕಿಷ್ಟು ಕಾಡುತ್ತಿರುವೆ

ಬಿಚ್ಚಿ ಹಾರಲು ಕನಸಿನ ರೆಕ್ಕೆಗಳ
ಇಚ್ಛೆಗಳಿಗೆ ಇರಲಿಲ್ಲ ಕಡಿವಾಣ
ಹೊಚ್ಚ ಹೊಸತು ಅನುದಿನ
ಹಚ್ಚಿದಂತೆ ನವಿರುಭಾವಗಳ ಬಣ್ಣ
ಇಂದ್ರಧನುವಿನಂತಹ ಮೋಹಕ
ಬಾಲ್ಯವೇ
ಯಾಕಿಷ್ಟು ಕಾಡುತ್ತಿರುವೆ

ಕೆಚ್ಚಿಲ್ಲ ರೊಚ್ಚಿಲ್ಲ
ನಿಚ್ಚಳ ನಿರ್ಮಲ ಮನಸ್ಸು
ಪೆಚ್ಚು ಮೋರೆ ಮುಗ್ಧ ಹಟ
ಹೆಚ್ಚು ಪ್ರೀತಿ ಹಂಚಿ ಹರಿವ
ಸಂತಸದ ಚಿಲುಮೆ ನೀ ಬಾಲ್ಯವೇ
ಯಾಕಿಷ್ಟು ಕಾಡುತ್ತಿರುವೆ.....

ಕವಿ ಮನಸು

## ಅಪ್ಪಯ್ಯನಿಗೊಂದಿಷ್ಟು....



ನೆರಳನು ನೀಡುವ ಸೂರನು ನೆನೆವುದು
ಹೊಣೆಯದು ನಮ್ಮದು ತಪ್ಪಲ್ಲ
ಜಡಿಮಳೆ ಸುರಿದರೆ ಬಿಸಿಲಿನ ತಾಪಕೆ
ರಕ್ಷಣೆ ಕೊಡುವುದು ನಮಗೆಲ್ಲ

ಸೂರಿಗೆ ನಮಿಸುತ ತಳವನು ಮರೆತರೆ
ಈ ನಡೆ ಎಂದುಗು ಸರಿಯಲ್ಲ
ನೆಲೆಸಲು ಭದ್ರದ ತಳವನು ಮರೆತರೆ
ದೇವರು ನಮ್ಮನು ಕ್ಷಮಿಸಲ್ಲ

ಪೀಠವನೂರಿದ ನೆಲವದು ಕುಸಿಯದೆ
ರಕ್ಷಿಸುತಿರುವುದು ತಳಪಾಯ
ನೆರಳನು ನೀಡುವ ಅಮ್ಮನ ಜೊತೆಯಲಿ
ಬದುಕನು ನೀಡುವ ಅಪ್ಪಯ್ಯ

ಬಾಳಿಗೆ ಭದ್ರಬುನಾದಿಯ ನೀಡುವ
ಅಪ್ಪನು ಬದುಕಿನ ಆಧಾರ
ಅಪ್ಪನು,ಅಮ್ಮನು ಹರಸಿದರಾದರೆ
ಗೆಲುವಿನ ಹಾಡಿಗೆ ಶ್ರೀಕಾರ॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

## ಯಾಂತ್ರೀಕೃತ ಬದುಕು

ಬದಲಾಗಿದ್ದೇವೆ ನಾವು ಕಾಲ ಸರಿದಂತೆ
ಜಗದ ನಿಯಮಕ್ಕೆ ಹೊಂದಿಕೊಳ್ಳುವಂತೆ
ಯಾಂತ್ರೀಕೃತ ಬದುಕಿಗೆ
ಮಾರುಹೋಗುವಂತೆ
ಎಲ್ಲರಲ್ಲೂ ಆವರಿಸಿದೆ ದಿನಕ್ಕೊಂದು
ಚಿಂತೆ//

ದೇವರು ಸೃಷ್ಟಿಸಿದ ಈ ಸೃಷ್ಟಿ ಅದ್ಭುತ
ಪ್ರಕೃತಿಯ ಸೌಂದರ್ಯ ಕಲೆ ಜೀವಂತ
ವಿಜ್ಞಾನಿಗಳ ಸಾಧನೆ ಲೋಕಕ್ಕೆ ಅಮೃತ
ಬಿಡುವಿಲ್ಲದ ನಮ್ಮ ಬದುಕು ಸದಾ
ಯಾಂತ್ರೀಕೃತ//

ಸಂಬಂಧಗಳ ಬೆಲೆ ತಿಳಿಯದಾಗಿದೆ ಇಂದು
ಯಾರಿಗೆ ಯಾರೂ ಇಲ್ಲವೆನ್ನುವ
ಕುಂದೊಂದು
ನನಗೆ ನಾನೇ ಎಂಬ ಜಂಭ ಬಂದು
ಕಾಲಕ್ಕೆ ತಕ್ಕಂತೆ ಕುಣಿಯುತ್ತಿದ್ದೇವೆ
ನಾವಿಂದು//

ಎಲ್ಲರೂ ಸಿರಿಸಂಪತ್ತಿಗೆ ದುರಾಸೆ ಪಡುತ
ಇಡೀ ಬದುಕನ್ನೇ ನಿರಾಸೆ ಮಾಡುತ
ಪ್ರೀತಿ ವಾತ್ಸಲ್ಯವನ್ನು ದೂರ ಮಾಡುತ
ನಮ್ಮ ಬಾಳೇ ನಿತ್ಯ ಬಹಳ ತುಡಿತ//

ಎಷ್ಟೊಂದು ಬದಲಾವಣೆ ದಿನಗಳೆದಂತೆ
ಪರಿಸ್ಥಿತಿಯ ಕೈ ಹಿಡಿಯಲಾಗದಂತೆ
ಆದರೂ ಖುಷಿಯಾಗಿ ಕಾಲ ಕಳೆಯಬೇಕು
ಎಲ್ಲರ ಜೊತೆ
ಬಿಟ್ಟು ಬಿಡೋಣ ಮನಸ್ಸಿನ ಕಳವಳ ವ್ಯಥೆ//

– ಸವಿತಾ ಸತೀಶ್ ಶೆಟ್ಟಿ
ದಕ್ಷಿಣ ಕನ್ನಡ

ಮೈಮೇಲೆ ಹರಿದ ಬಟ್ಟೆ ಇದ್ದರೂ
ಚಿಂತೆಯಿಲ್ಲ, ಕೈಯಲ್ಲೊಂದು
ಕನ್ನಡ ದಿನಪತ್ರಿಕೆ ಇರಲಿ
ಡಿ.ವಿ.ಜಿ.

**ಓದುಗರ ಗಮನಕ್ಕೆ**

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

# ಹೋಟೆಲ್ ಮ್ಯಾನೇಜ್‌ಮೆಂಟ್ ಕೋರ್ಸ್ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ತರಬೇತಿ



■ **ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ 'ಸ್ಕಿಲ್ ಡೆವಲಪ್ಮೆಂಟ್ ಸೆಂಟರ್' ನೇತೃತ್ವದಲ್ಲಿ ಹೋಟೆಲ್ ಮ್ಯಾನೇಜ್‌ಮೆಂಟ್ ಕೋರ್ಸ್‌ನ ಭಾಗವಾಗಿ ತೋರಣಗಲ್ಲು, ಹೊಸಪೇಟೆ ಮತ್ತು ಹಂಪೆಯ ಅಂತಾರಾಷ್ಟ್ರೀಯ ದರ್ಜೆಯ ವಿವಿಧ ಹೋಟಲ್‌ಗಳಲ್ಲಿ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ತರಬೇತಿ ನೀಡಲಾಯಿತು.

ಅಂತಾರಾಷ್ಟ್ರೀಯ ದರ್ಜೆಯ ತೋರಣಗಲ್ಲು ವಿದ್ಯಾನಗರ ಹೋಟಲ್ ಹಯಾತ್, ರಾಕ್ ರೀಜೆನ್ಸಿ, ಹೊಸಪೇಟೆಯ ರಾಯಲ್ ಆರ್ಕಿಡ್, ಹಂಪೆಯ ವಿಜಯಶ್ರೀ ಹೆರಿಟೇಜ್ ಮತ್ತು ದರೋಜಿಯ ಎವಾಲ್ವ್ ಬ್ಯಾಕ್ ಹೋಟಲ್‌ನಲ್ಲಿ ಒಟ್ಟು 33 ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ತರಬೇತಿ ನೀಡಲಾಯಿತು.

ಹೋಟಲ್ ಹಯಾತ್‌ನ ಅಸಿಸ್ಟೆಂಟ್ ಜನರಲ್ ಮೇನೇಜರ್ ರವೀಂದ್ರನಾಥ್, ತರಬೇತಿ ಅಧಿಕಾರಿ ನೈಜಲ್ ನಾಯ್ಡು, ರಕ್ಷಿತ್ ಮತ್ತು ಶಂಪಾ ಅವರು, ವಿದ್ಯಾರ್ಥಿಗಳಿಗೆ ಹೋಟಲ್‌ನ ಕೋಣೆಗಳ ನಿರ್ವಹಣೆ, ಹೋಟಲ್‌ನಲ್ಲಿಯ ದೈನಂದಿನ ಚಟುವಟಿಕೆಗಳು, ಗ್ರಾಹಕರೊಂದಿಗಿನ ಆತ್ಮೀಯತೆ, ಶಿಸ್ತು–ಸಂಯಮ ಮತ್ತು ಇನ್ನಿತರೆಗಳ ಕುರಿತು ಪ್ರಾಯೋಗಿಕ ತರಬೇತಿ ನೀಡಿದರು.

ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ 'ಸ್ಕಿಲ್ ಡೆವಲಪ್‌ಮೆಂಟ್ ಸೆಂಟರ್'ನ ಹೋಟೆಲ್ ಮ್ಯಾನೇಜ್‌ಮೆಂಟ್ ಕೋರ್ಸ್‌ನ ತರಬೇತುದಾರರಾದ ಅನಿಲ್ ಕನಗಿನಿ ಮತ್ತು ಅನುಷಾ ಅವರು, ವಿದ್ಯಾರ್ಥಿಗಳಿಗೆ ವೃತ್ತಿಪರ ಕೌಶಲ್ಯ ನೀಡಲು ಅಂತಾರಾಷ್ಟ್ರೀಯ ದರ್ಜೆಯ ಹೋಟಲ್‌ಗಳ ನಿರ್ವಹಣೆ ಮತ್ತು ದೈನಂದಿನ ಚಟುವಟಿಕೆಗಳ ಕುರಿತು ಪ್ರಾಯೋಗಿಕ ತರಬೇತಿ ಅಗತ್ಯವಾಗಿದೆ ಎಂದು ತಿಳಿಸಿದರು.

ವಿದ್ಯಾರ್ಥಿಗಳನ್ನು ತೋರಣಗಲ್ಲು, ಹೊಸಪೇಟೆ ಮತ್ತು ಹಂಪೆಯ ಹೋಟಲ್‌ಗಳಿಗೆ ಕರೆದುಕೊಂಡು ಬಂದು, ವೃತ್ತಿಪರರಿಂದಲೇ ಪ್ರಾಯೋಗಿಕ ತರಬೇತಿ ನೀಡಲಾಗಿದೆ ಎಂದರು.

ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ 'ಸ್ಕಿಲ್ ಡೆವಲಪ್ಮೆಂಟ್ ಸೆಂಟರ್'ನ ಹೋಟೆಲ್ ಮ್ಯಾನೇಜ್‌ಮೆಂಟ್ ಕೋರ್ಸ್‌ನ ವಿದ್ಯಾರ್ಥಿಗಳಾದ ಎರ್ರಿಸ್ವಾಮಿ ನಾಯಕ್ ಮತ್ತು ಜಿ.ಜ್ಯೋತಿ ಅವರು, ಅಂತಾರಾಷ್ಟ್ರೀಯ ದರ್ಜೆಯ ಹೋಟಲ್‌ಗಳಲ್ಲಿಯ ದೈನಂದಿನ ನಿರ್ವಹಣೆ – ಚಟುವಟಿಕೆಗಳ ಕುರಿತು ಸಾಕಷ್ಟು ಮಾಹಿತಿ ಸಿಕ್ಕಿದೆ. ಕೋರ್ಸ್ ಪೂರ್ಣಗೊಂಡ ನಂತರ ಇಲ್ಲಿಯ ವಿದ್ಯಾರ್ಥಿಗಳಿಗೆ ಉದ್ಯಮದಲ್ಲಿ ಖಂಡಿತವಾಗಿಯೂ ಅಪಾರ ಬೇಡಿಕೆ ಬರಲಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಬಿಡಿಸಿಸಿಐನ ಜಂಟಿ ಕಾರ್ಯದರ್ಶಿ ಡಾ. ಮರ್ಚೆಡ್ ಮಲ್ಲಿಕಾರ್ಜುನ ಗೌಡ ಅವರು ಮಾತನಾಡಿ, ಹೋಟಲ್‌ಗಳ ನಿರ್ವಹಣೆಯಲ್ಲಿ ವೃತ್ತಿಪರತೆ ಅಗತ್ಯವಿದೆ. ಈ ನಿಟ್ಟಿನಲ್ಲಿ ಜಿಲ್ಲಾ ಪಂಚಾಯಿತಿ, ಜಿಲ್ಲಾ ಕೌಶಲ್ಯಾಭಿವೃದ್ಧಿ ಇಲಾಖೆಯ ಸಹಯೋಗದಲ್ಲಿ ಜಿಲ್ಲೆಯ ನಿರುದ್ಯೋಗಿಗಳಿಗೆ ಹೋಟಲ್ ಮ್ಯಾನೇಜ್‌ಮೆಂಟ್ ಕೋರ್ಸ್‌ನ ತರಬೇತಿ ನೀಡಲಾಗುತ್ತಿದೆ. ಮೊದಲನೇ ಬ್ಯಾಚ್‌ನ ಕೌಶಲ್ಯತೆ ಆಧರಿಸಿ, ಎರಡನೇ ಬ್ಯಾಚ್ ಪ್ರಾರಂಭಿಸುತ್ತೇವೆ ಎಂದರು.

ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಹಿರಿಯ ಉಪಾಧ್ಯಕ್ಷ ಹಾಗೂ ಸ್ಕಿಲ್ ಡೆವಲಪ್‌ಮೆಂಟ್ ಸೆಂಟರ್‌ನ ಕಾರ್ಯದರ್ಶಿ ಯಶವಂತರಾಜ್ ನಾಗಿರೆಡ್ಡಿ ಅವರು ಮಾತನಾಡಿದರು.

ತರಬೇತಿಯಲ್ಲಿ ಹೋಟಲ್ ಹಯಾತ್‌ನ ಮೈಕಲ್, ರಾಯಲ್ ಆರ್ಕಿಡ್‌ನ ಇಬ್ರಾಹಿಂ, ಎವಾಲ್ವ್ ಬ್ಯಾಕ್‌ನ ಜಾನ್ಸಿ, ವಿದ್ಯಾಶ್ರೀ ರೆಸಾರ್ಟ್‌ನ ತನುಶ್ರೀ ಅವರು ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು.

# ಸರ್ಕಾರಿ ವಸತಿ ಪಿಯು ಕಾಲೇಜಿಗೆ ಪ್ರವೇಶ ಆರಂಭ

## ಅರ್ಜಿ ಸಲ್ಲಿಸಲು ಮೇ 20 ಕೊನೆದಿನ | ಪಿಯು ವಿಜ್ಞಾನ ಪಿಸಿಎಂಬಿ, ಪಿಸಿಎಂಸಿ ಕೋರ್ಸ್

■ **ಹಂಪಿ ಟೈಮ್ಸ್ ಹೊಸಪೇಟೆ**

ವಿಜಯನಗರ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮೊರಾರ್ಜಿ ದೇಸಾಯಿ ಹಾಗೂ ಅಟಲ್ ಬಿಹಾರಿ ವಾಜಪೇಯಿ ಪದವಿ ಪೂರ್ವ ವಸತಿ ಕಾಲೇಜುಗಳಲ್ಲಿ 2024–25ನೇ ಸಾಲಿನ ಪ್ರಥಮ ಪಿಯುಸಿ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ತಾಲೂಕಿನ ತಿಮ್ಮಲಾಪುರದ ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ವಿಜ್ಞಾನ ಕಾಲೇಜು, ಕೂಡ್ಲಿಗಿ ತಾಲೂಕಿನ ಕಂದಗಲ್ಲು ಗ್ರಾಮದಲ್ಲಿನ ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ವಿಜ್ಞಾನ ಕಾಲೇಜು ಮತ್ತು ಹರಪನಹಳ್ಳಿ ತಾಲೂಕಿನ ಹಲವಾಗಲು ಗ್ರಾಮದಲ್ಲಿರುವ ಅಟಲ್ ಬಿಹಾರಿ ವಾಜಪೇಯಿ ಪದವಿ ಪೂರ್ವ ವಸತಿ ವಿಜ್ಞಾನ ಕಾಲೇಜುಗಳು ಪ್ರಥಮ ಪಿಯುಸಿ ವಿಜ್ಞಾನ ವಿಭಾಗದ ಪಿಸಿಎಂಬಿ ಮತ್ತು ಪಿಸಿಎಂಸಿ ಸಂಯೋಜನೆಯೊಂದಿಗೆ ಕಾರ್ಯನಿರ್ವಹಿಸುತ್ತಿದ್ದು ಅರ್ಹ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ.

ವಿದ್ಯಾರ್ಥಿಗಳಿಗೆ ಉಚಿತ ಊಟ, ವಸತಿ, ಸಮವಸ್ತ್ರ, ಪಠ್ಯಪುಸ್ತಕ ಹಾಗೂ ಇನ್ನಿತರೆ ಮೂಲಭೂತ ಸೌಲಭ್ಯದ ಜತೆಗೆ ಉತ್ತಮ ವಿದ್ಯಾಭ್ಯಾಸ ನೀಡಲಾಗುತ್ತದೆ. ಈ ವಿಜ್ಞಾನ ಕಾಲೇಜುಗಳಲ್ಲಿ ಪ್ರಸಕ್ತ ಸಾಲಿನ ಪ್ರಥಮ ಪದವಿ ಪೂರ್ವ ವಿಜ್ಞಾನ ಕೋರ್ಸ್‌ಗಳಿಗೆ ಪ್ರವೇಶಗಳು ಪ್ರಾರಂಭವಾಗಿದ್ದು ಮೇ 11 ರಿಂದ ಅರ್ಜಿ ವಿತರಿಸಲಾಗುತ್ತಿದೆ. ಪಿಸಿಎಂಬಿ ಮತ್ತು ಪಿಸಿಎಂಸಿ ಈ ಸಂಯೋಜನೆಗಳಿಗೆ ತಲಾ 40 ವಿದ್ಯಾರ್ಥಿಗಳನ್ನು ಮೆರಿಟ್ ಹಾಗೂ ವರ್ಗದ ಆಧಾರದ ಮೇಲೆ ಆಯ್ಕೆ ಮಾಡಲಾಗುವುದು.

2023–24ನೇ ಶೈಕ್ಷಣಿಕ ಸಾಲಿನಲ್ಲಿ ಎಸ್.ಎಸ್.ಎಲ್.ಸಿ ತರಗತಿಯಲ್ಲಿ ವ್ಯಾಸಾಂಗ ಮಾಡಿರುವ ಮೊರಾರ್ಜಿ ದೇಸಾಯಿ, ಕಿತ್ತೂರು ರಾಣಿ ಚೆನ್ನಮ್ಮ, ಏಕಲವ್ಯ ಮಾದರಿ, ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳಲ್ಲಿ ಯಾವುದೇ ಶಾಲೆಯ ವಿದ್ಯಾರ್ಥಿಗಳು ಮತ್ತು ಈ ಹಿಂದೆ ಪಾಸು ಮಾಡಿರುವ ವಿದ್ಯಾರ್ಥಿಗಳು ಪ್ರಥಮ ಪಿಯುಸಿ ತರಗತಿ ದಾಖಲಾತಿಗೆ ಅರ್ಜಿ ಸಲ್ಲಿಸಬಹುದಾಗಿದೆ. ಹಾಗೇ ಎಸ್.ಎಸ್.ಎಲ್.ಸಿ ಅಂಕಗಳ ಮತ್ತು ಮೀಸಲಾತಿ ಆಧಾರದ ಮೇಲೆ ಅರ್ಹತಾ ಪಟ್ಟಿ ತಯಾರಿಸಿ ಪ್ರವೇಶ ನೀಡಲಾಗುವುದು.

ಹೊಸಪೇಟೆ ತಾಲೂಕಿನ ತಿಮ್ಮಲಾಪುರ, ಕೂಡ್ಲಿಗಿ ತಾಲೂಕಿನ ಕಂದಗಲ್ಲು, ಅದೇ ರೀತಿ ಹರಪನಹಳ್ಳಿ ತಾಲೂಕಿನ ಹಲವಾಗಲು ಕಾಲೇಜುಗಳಲ್ಲಿ ಅರ್ಜಿಗಳನ್ನು ನೀಡಲಾಗುತ್ತಿದೆ. ಅರ್ಜಿಗಳ ಪ್ರತಿಯನ್ನು **www.kreis.kar.nic.in** ವೆಬ್ಸೈಟ್ ಮೂಲಕ ಮತ್ತು ಸಂಬಂಧಿಸಿದ ಎಲ್ಲಾ ವಸತಿ ಶಾಲೆ ಹಾಗೂ ಕಾಲೇಜುಗಳಲ್ಲಿ ಸಹ ತೆಗೆದುಕೊಳ್ಳಬಹುದಾಗಿದೆ.

ಈ ಮೇಲಿನ ಕಾಲೇಜುಗಳಲ್ಲಿ ಸೇರಬಯಸುವ ವಿದ್ಯಾರ್ಥಿಗಳು ಮೇಲ್ಕಂಡ ಸ್ಥಳಗಳಲ್ಲಿ ಅರ್ಜಿಗಳನ್ನು ಉಚಿತವಾಗಿ ಪಡೆದು ಭರ್ತಿ ಮಾಡಿ ತುಂಬಿದ ಅರ್ಜಿಗಳನ್ನು ವಿಜಯನಗರ ಜಿಲ್ಲೆಯ ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ವಿಜ್ಞಾನ ಕಾಲೇಜುಗಳು ಹಾಗೂ ಎಲ್ಲಾ ವಸತಿ ಶಾಲೆ ಮತ್ತು ಕಾಲೇಜುಗಳಲ್ಲಿ ಸಲ್ಲಿಸಲು ಮೇ 20 ರೊಳಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಹೊಸಪೇಟೆ ತಾಲೂಕಿನ ತಿಮ್ಮಲಾಪುರ ಅಥವಾ ಕೂಡ್ಲಿಗಿ ತಾಲೂಕಿನ ಕಂದಗಲ್ಲು ಕಾಲೇಜು (ಮೊ:9448874562) ಅಥವಾ ಹರಪ್ಪನಹಳ್ಳಿ ತಾಲೂಕಿನಹಲವಾಗಲು (ಮೊ:9739102808) ಗೆ ಸಂಪರ್ಕಿಸಬಹುದಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆಯ ಜಂಟಿನಿರ್ದೇಶಕರು ತಿಳಿಸಿದ್ದಾರೆ.

# ಮೇ 19 ರಂದು 6ನೇ ತರಗತಿ ಪ್ರವೇಶ ಪರೀಕ್ಷೆ

■ **ಹಂಪಿ ಟೈಮ್ಸ್ ಕೊಪ್ಪಳ**

2024–25 ನೇ ಸಾಲಿಗೆ ಕೊಪ್ಪಳ ಜಿಲ್ಲೆಯ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ/ಎ.ಪಿ.ಜೆ.ಅಬ್ದುಲ್ ಕಲಾಂ ವಸತಿ ಶಾಲೆಗಳ 6ನೇ ತರಗತಿ ಪ್ರವೇಶ ಪರಿಕ್ಷೆಗಾಗಿ ಅರ್ಜಿ ಸಲ್ಲಿಸಿರುವ ವಿದ್ಯಾರ್ಥಿಗಳಿಗೆ ಪ್ರವೇಶ ಪರೀಕ್ಷೆಯನ್ನು ಮೇ 19 ರ ಭಾನುವಾರದಂದು ಬೆಳಿಗ್ಗೆ 11 ಗಂಟೆಯಿಂದ ಮಧ್ಯಾಹ್ನ 01 ಗಂಟೆಯವರೆಗೆ ನಡೆಸಲಾಗುವುದು.

ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಿರುವ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ/ ಎ.ಪಿ.ಜೆ.ಅಬ್ದುಲ್ ಕಲಾಂ ಶಾಲೆಗಳಿಗೆ ಭೇಟಿ ನೀಡಿ ಪ್ರವೇಶ ಪತ್ರವನ್ನು ಪಡೆದುಕೊಳ್ಳಬಹುದು. ಹಾಗೂ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಪ್ರಾಂಶುಪಾಲರುಗಳಾದ ಮೂಕಪ್ಪ, ಕುಕನೂರು–9844040035, ನಾಗರಾಜ, ತಳಕಲ್–8310846415, ಮುತ್ತಣ್ಣ, ಕುದರಿಮೋತಿ–9740702035, ಮಂಜುನಾಥ, ಟಣಕನಕಲ್–9902690349, ದ್ಯಾಮಣ್ಣ ಗದ್ದಿ, ಹಿರೇಬೆಣಕಲ್–1: 9019755641, ರಾಮಲಿಂಗಪ್ಪ, ಹಿರೇಬೆಣಕಲ್–2: 8150924173, ಗೌಸ್‌ಪೀರ್, ಹಿರೇಬನ್ನಿಗೋಳ(ಕುಷ್ಟಗಿ)– 9591439223, ಅಲ್ಪಸಂಖ್ಯಾತರ ನವೋದಯ ಮಾದರಿಯ ವಸತಿ ಶಾಲೆ ಕೊಪ್ಪಳ, ದೊಡ್ಡಪ್ಪ–8747092789 ಇವರನ್ನು ಸಂಪರ್ಕಿಸಬಹುದು.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಅಧಿಕಾರಿಗಳ ಕಛೇರಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಮೌಲಾನಾ ಆಜಾದ್ ಭವನ ಹೊಸಪೇಟೆ ರಸ್ತೆ ಕೊಪ್ಪಳ–583231 ದೂರವಾಣಿ ಸಂಖ್ಯೆ:–08539–225070 ಈ ವಿಳಾಸಕ್ಕೆ ಸಂಪರ್ಕಿಸಬಹುದು ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮೇ 17ಕ್ಕೆ ಲೋಕಾಯುಕ್ತದಿಂದ ಅಹವಾಲು ಸ್ವೀಕಾರ ಕಾರ್ಯಕ್ರಮ

■ **ಹಂಪಿ ಟೈಮ್ಸ್ ಕೊಪ್ಪಳ**

ಕೊಪ್ಪಳ ಲೋಕಾಯುಕ್ತದ ವತಿಯಿಂದ ಜಿಲ್ಲೆಯ ಕಾರಟಗಿ, ಕನಕಗಿರಿ ಮತ್ತು ಗಂಗಾವತಿ ತಾಲ್ಲೂಕುಗಳನ್ನು ಒಳಗೊಂಡಂತೆ ಮೇ 17 ರಂದು ಬೆಳಿಗ್ಗೆ 10.30 ಗಂಟೆಗೆ ಗಂಗಾವತಿ ತಾಲ್ಲೂಕು ಪಮಚಾಯತಿಯ ಮಂಥನ ಸಭಾಂಗಣದಲ್ಲಿ ಸಾರ್ವಜನಿಕರ ಕುಂದು ಕೊರತೆಗಳ ಅಹವಾಲು ಸ್ವೀಕಾರ ಸಭೆಯನ್ನು ಆಯೋಜಿಸಲಾಗಿದೆ.

ಮೇಲ್ಕಂಡ ತಾಲ್ಲೂಕುಗಳ ವ್ಯಾಪ್ತಿಯಲ್ಲಿ ಯಾರಿಗಾದರೂ ಸರ್ಕಾರಿ ಅಧಿಕಾರಿಗಳಿಂದ ತಮಗೆ ಆಗಬೇಕಾದ ಕೆಲಸಗಳಲ್ಲಿ ವಿಳಂಬವಾಗಿದ್ದರೆ ಅಥವಾ ಅಧಿಕಾರಿಗಳು ನ್ಯಾಯಯುತವಾಗಿ ಮಾಡಿ ಕೊಡಬೇಕಾದ ಕೆಲಸಗಳಲ್ಲಿ ವೃಥಾ ತೊಂದರೆ ಕೊಡುತ್ತಿದ್ದರೆ ಅಥವಾ ಲಂಚ ಕೇಳುವುದು ಇತ್ಯಾದಿ ದುರಾಡಳಿತದಲ್ಲಿ ತೊಡಗಿದ್ದರೆ ಅಹವಾಲು ಸ್ವೀಕಾರ ಸಭೆಯಲ್ಲಿ ಪಾಲ್ಗೊಂಡು ದೂರು ಸಲ್ಲಿಸಬಹುದು.

ಸಾರ್ವಜನಿಕರು ತಮ್ಮ ಕುಂದುಕೊರತೆಗಳನ್ನು ನೇರವಾಗಿ ಬಂದು ಸಲ್ಲಿಸಲು ಹಾಗೂ ಸ್ಥಳದಲ್ಲಿಯೇ ಇದ್ದ ಅಧಿಕಾರಿಗಳೊಂದಿಗೆ ಕೆಲಸ ನೆರವೇರಿಸಿಕೊಳ್ಳಲು ಅಥವಾ ಸ್ಥಳದಲ್ಲಿಯೇ ದೂರು ಅರ್ಜಿಯ ಫಾರಂ ನಂ : 1 ಮತ್ತು 2 ತೆಗೆದುಕೊಂಡು ದೂರು ನೀಡಲು ಅನುಕೂಲ ಕಲ್ಪಿಸಲಾಗಿದ್ದು, ಸಾರ್ವಜನಿಕರು ಸದುಪಯೋಗ ಪಡೆದುಕೊಳ್ಳಬೇಕು. ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂ : 9364062699, 9364062700, 9364062701, 9364062702 ಮತ್ತು 9364062703 ಗೆ ಸಂಪರ್ಕಿಸಬಹುದು ಎಂದು ಕೊಪ್ಪಳ ಲೋಕಾಯುಕ್ತದ ಪೊಲೀಸ್ ಉಪಾಧೀಕ್ಷಕರು ತಿಳಿಸಿದ್ದಾರೆ.

# ಭಗೀರಥ ಮಹರ್ಷಿ ಜಯಂತ್ಯೋತ್ಸವ



■ **ಹಂಪಿ ಟೈಮ್ಸ್ ಕೊಪ್ಪಳ**

ಜಿಲ್ಲಾಡಳಿತ ಭವನ ಸಂಕೀರ್ಣದಲ್ಲಿರುವ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಕಚೇರಿಯಲ್ಲಿ ಮಂಗಳವಾರದಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಾದ ಡಾ.ಲಿಂಗರಾಜು ಟಿ. ಇವರ ನೇತೃತ್ವದಲ್ಲಿ ಶ್ರೀ ಭಗೀರಥ ಮಹರ್ಷಿ ಜಯಂತಿ ಕಾರ್ಯಕ್ರಮ ಆಚರಿಸಲಾಯಿತು. ಈ ಕಾರ್ಯಕ್ರಮದಲ್ಲಿ ಜಿಲ್ಲಾ ಮಟ್ಟದ ಕಾರ್ಯಕ್ರಮ ಅನುಷ್ಠಾನಾಧಿಕಾರಿಗಳು. ವಿವಿಧ ವೃಂದದ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಭಾಗವಹಿಸಿದ್ದರು.

# ಮುಂಗಾರು ಪೂರ್ವ ಸಿದ್ದತೆಗೆ ಅಧಿಕಾರಿಗಳು ಕ್ರಮವಹಿಸಿ

## ಜಿಲ್ಲಾ ವಿಪತ್ತು ನಿರ್ವಹಣಾ ಅಧ್ಯಕ್ಷ, ಜಿಲ್ಲಾಧಿಕಾರಿ ನಲಿನ್ ಅತುಲ್ ಹೇಳಿಕೆ | ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆ

■ **ಹಂಪಿ ಟೈಮ್ಸ್ ಕೊಪ್ಪಳ**

ಕೆಲವೇ ದಿನಗಳಲ್ಲಿ ಮುಂಗಾರು ಆರಂಭವಾಗುತ್ತಿದ್ದು, ಮುನ್ನೆಚ್ಚರಿಕಾ ಕ್ರಮವಾಗಿ ಅಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ತೆಗೆದುಕೊಳ್ಳಬಹುದಾದ ಮುಂಜಾಗ್ರತಾ ಕ್ರಮಗಳ ಕುರಿತು ಪರಿಶೀಲಿಸಿ, ಅಗತ್ಯ ಕ್ರಮ ಕೈಗೊಳ್ಳಿ ಎಂದು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರು ಹಾಗೂ ಜಿಲ್ಲಾಧಿಕಾರಿಗಳಾದ ನಲಿನ್ ಅತುಲ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಕಳೆದ ಸಾಲಿನ ಮುಂಗಾರು ಸಂದರ್ಭಗಳಲ್ಲಿ ಮಳೆಯಿಂದ ಹಾನಿಗೊಳಗಾದ ಪ್ರದೇಶಗಳಲ್ಲಿ ತಹಶೀಲ್ದಾರರು ಖುದ್ದಾಗಿ ಭೇಟಿ ನೀಡಿ ಪರಿಶೀಲಿಸಬೇಕು. ಹಿಂದಿನ ಹಾನಿ ಮರುಕಳಿಸದಂತೆ ಕೈಗೊಳ್ಳಬಹುದಾದ ಮುನ್ನೆಚ್ಚರಿಕಾ ಕ್ರಮಗಳ ಕುರಿತು ಪರಿಶೀಲನೆ ನಡೆಸಿ ಕೂಡಲೇ ಕ್ರಮ ಕೈಗೊಳ್ಳಬೇಕು. ಕುಡಿಯುವ ನೀರಿನ ಪೈಪ್ ದುರಸ್ಥಿ, ಚರಂಡಿಗಳ ನಿರ್ವಹಣೆ, ಸೇರಿದಂತೆ ಮಳೆಯಿಂದ ಉಂಟಾಗಬಹುದಾದ ಹಾನಿ ಹಾಗೂ ಸಮಸ್ಯೆಗಳ ಕುರಿತು ಪೂರ್ವಸಿದ್ದತೆಯಾಗಿ ನಿರ್ವಹಣಾ ಕ್ರಮಗಳನ್ನು ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳೊಂದಿಗೆ ಚರ್ಚಿಸಿ ಅನುಷ್ಠಾನಗೊಳಿಸಬೇಕು. ಹಿಂದಿನ ವರ್ಷಗಳ ಮುಂಗಾರು ಮಳೆಯಿಂದ ಉಂಟಾದ ಹಾನಿ ಕುರಿತು ಕೈಗೊಂಡ ಪರಿಹಾರ ಕ್ರಮಗಳ ಬಗ್ಗೆ ಬಾಕಿ ಇರುವ ಬಿಲ್‌ಗಳನ್ನು ಶುಕ್ರವಾರದೊಳಗೆ ಸಲ್ಲಿಸಿ, ಪಾವತಿಗೆ ಕ್ರಮ ವಹಿಸಬೇಕು ಎಂದು ಅಧಿಕಾರಿಗಳಿಗೆ ಹಾಗೂ ಅನುಷ್ಠಾನ ಏಜೆನ್ಸಿಗಳಿಗೆ ಜಿಲ್ಲಾಧಿಕಾರಿಗಳು ಸೂಚಿಸಿದರು.



**ಬರಗಾಲ ಮಾಹಿತಿ ವಿವರ :**

ಕೊಪ್ಪಳ ತಾಲ್ಲೂಕಿನ ಓಜನಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಟಣಕನಕಲ್ ಹಾಗೂ ಬೂದಗುಂಪಾ ಗ್ರಾಮ ಪಂಚಾಯತಿ ವ್ಯಾಪ್ತಿಯ ನಾಗೇಶನಹಳ್ಳಿ ಹಾಗೂ ಜಬ್ಬಲಗುಡ್ಡ ಗ್ರಾಮಗಳಿಗೆ ಪ್ರತಿ ದಿನ 13 ಟ್ರಿಪ್‌ಗಳಲ್ಲಿ ಟ್ಯಾಂಕರ್ ಮೂಲಕ ಕುಡಿಯುವ ನೀರು ಪೂರೈಕೆ ಮಾಡಲಾಗುತ್ತಿದೆ. ಮೇ 10 ರಂತೆ ಜಿಲ್ಲೆಯಾದ್ಯಂತ 35 ವಾರಗಳಿಗೆ ಸಾಕಾಗುವಷ್ಟು 5,28,994.91 ಟನ್ ಮೇವು ಲಭ್ಯವಿದೆ. ಮುಂದಿನ ದಿನಗಳ ಅಗತ್ಯತೆಗಾಗಿ ಮೇವು ಖರೀದಿಗೆ ಟೆಂಡರ್ ಪ್ರಕ್ರಿಯೆ ಆರಂಭಿಸಲಾಗಿದೆ. ಜಿಲ್ಲೆಗೆ ಪಶು ಸಂಗೋಪನೆ ಇಲಾಖೆಯಿಂದ ನೀಡಲಾದ 26,659 ಮಿನಿ ಮೇವಿನ ಕಿಟ್‌ಗಳಲ್ಲಿ 9,167 ರೈತರಿಗೆ 21,887 ಮಿನಿ ಮೇವು ಕಿಟ್‌ಗಳನ್ನು ವಿತರಿಸಲಾಗಿದೆ ಎಂದು ಜಿಲ್ಲಾಧಿಕಾರಿಗಳು ಮಾಹಿತಿ ನೀಡಿದರು.

**2024–25ನೇ ಸಾಲಿನ ಅತಿವೃಷ್ಟಿ ಪರಿಹಾರ ವಿವರ :**

ಏಪ್ರಿಲ್‌ನಿಂದ ಮೇ ವರೆಗೆ ಸುರಿದ ಮಳೆಯಿಂದ 3 ಮಾನವ ಜೀವ ಹಾನಿಯಾಗಿದ್ದು, ತಲಾ ರೂ.5 ಲಕ್ಷದಂತೆ ಒಟ್ಟು ರೂ.15 ಲಕ್ಷ ಪರಿಹಾರವನ್ನು ವಿತರಿಸಲಾಗಿದೆ. ಸಿಡಿಲಿನ ಆಘಾತದಿಂದ ಉಂಟಾದ ಒಟ್ಟು 20 ಜಾನುವಾರು ಪ್ರಾಣ ಹಾನಿ ಪ್ರಕರಣಗಳಲ್ಲಿ ರೂ.3,59,500/– ಗಳ ಪರಿಹಾರ ಮೊತ್ತವನ್ನು ವಿತರಿಸಲಾಗಿದೆ ಎಂದು ಅವರು ತಿಳಿಸಿದರು. ತಹಶೀಲ್ದಾರ ಅವರ ವಿಪತ್ತಿನ ಪಿಡಿ ಖಾತೆಯಲ್ಲಿ ಎಲ್ಲ 7 ತಹಶೀಲ್ದಾರರ ಖಾತೆಯಲ್ಲಿ ಒಟ್ಟು 320.44 ಲಕ್ಷ ಗಳ ಅನುದಾನ ಲಭ್ಯವಿದೆ ಎಂದು ಜಿಲ್ಲಾಧಿಕಾರಿಗಳು ಮಾಹಿತಿ ನೀಡಿದರು.

**ರೈತರಿಗೆ ಸೂಕ್ತ ಮಾಹಿತಿ ನೀಡಲು ಸೂಚನೆ :**

ಬರ ಹಾಗೂ ಅತಿವೃಷ್ಠಿಯಿಂದ ಉಂಟಾದ ಬೆಳೆ ಹಾನಿಗಳಲ್ಲಿ ಪರಿಹಾರ ವಿತರಣೆ ಪ್ರಕರಣಗಳಲ್ಲಿ ಸೂಕ್ತ ದಾಖಲೆ ಇರುವ ರೈತರಿಗೆ ಈಗಾಗಲೇ ಪರಿಹಾರ ಮೊತ್ತ ಬಿಡುಗಡೆ ಮಾಡಲಾಗಿದೆ. ಆದರೆ ಕೆಲವು ರೈತರು ಫ್ರೂಟ್ಸ್ ಐಡಿ, ಸರ್ವೆ ಸಂಖ್ಯೆ, ಬ್ಯಾಂಕ್ ಖಾತೆಗೆ ಸಂಬಂಧಿಸಿದ ಸಮಸ್ಯೆಗಳಿಂದ ಪರಿಹಾರದಿಂದ ವಂಚಿತರಾಗಿದ್ದಾರೆ. ಪರಿಹಾರ ಮೊತ್ತ ಪಡೆಯಲು ಇರುವ ಸಮಸ್ಯೆಗಳ ಕುರಿತು ದೂರು/ಅಹವಾಲು ಸಲ್ಲಿಸಲು ತಾಲ್ಲೂಕು ಹಂತದಲ್ಲಿ ಕಾಲ್ ಸೆಂಟರ್‌ಗಳನ್ನು ತೆರೆಯಬೇಕು. ಜಿಲ್ಲಾ ಹಂತದಲ್ಲಿಯೂ ಕಾಲ್ ಸೆಂಟರ್ ಆರಂಭಿಸಬೇಕು. ಬರ ನಿರ್ವಹಣೆಗೆ ತೆರೆಯಲಾದ ಸಹಾಯವಾಣಿ ಸಂಖ್ಯೆಗಳನ್ನು ಈ ಕಾರ್ಯಕ್ಕೂ ಬಳಸಿಕೊಳ್ಳಬಹುದು. ಆದ್ದರಿಂದ ಎಲ್ಲ ಕಂದಾಯ ನಿರೀಕ್ಷಕರು, ಗ್ರಾಮ ಆಡಳಿತಾಧಿಕಾರಿಗಳು ರೈತರು ಕೇಳುವ ಯಾವುದೇ ಪ್ರಶ್ನೆಗಳಿಗೆ ಸೂಕ್ತ ಮಾಹಿತಿಯನ್ನು ನೀಡಬೇಕು. ಸಭೆಯಲ್ಲಿ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ರತ್ನಂ ಪಾಂಡೆಯ, ಅಪರ ಜಿಲ್ಲಾಧಿಕಾರಿ ಸಾವಿತ್ರಿ ಬಿ.ಕಡಿ, ಸಹಾಯಕ ಆಯುಕ್ತರಾದ ಕ್ಯಾಪ್ಟನ್ ಮಹೇಶ್ ಮಾಲಗಿತ್ತಿ, ನಗರಾಭಿವೃದ್ಧಿ ಪ್ರಾಧಿಕಾರದ ಯೋಜನಾ ನಿರ್ದೇಶಕರಾದ ರೇಷ್ಮಾ ಹಾನಗಲ್, ಜಂಟಿ ಕೃಷಿ ನಿರ್ದೇಶಕರಾದ ರುದ್ರೇಶಪ್ಪ, ತಹಶೀಲ್ದಾರ ವಿಠ್ಠಲ್ ಚೌಗಲಾ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು, ತಾಲ್ಲೂಕು ತಹಶೀಲ್ದಾರರು, ಇತರರು ಉಪಸ್ಥಿತರಿದ್ದರು.




## ನಿತ್ಯ ಪಂಚಾಂಗ

ಮಾಸ: ವೈಶಾಖ । ಸಂವತ್ಸರ: ಕ್ರೋಧಿ

**15-05-2024 – ಬುಧವಾರ**

| | |
|---|---|
| ತಿಥಿ | : ಅಷ್ಟಮಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಅಶ್ಲೇಷ |
| ಯೋಗ | : ವೃದ್ಧಿ |
| ಕರಣ | : ವಿಷ್ಟಿ |
| ಸೂರ್ಯೋದಯ | : 05:46:55 |
| ಸೂರ್ಯಾಸ್ತ | : 18:59:56 |
| ರಾಹು | : 12:23-14:03 |
| ಯಮಘಂಡ | : 07:26-09:05 |
| ಗುಳಿಕ | : 10:44-12:23 |

## ತುಂಗಭದ್ರಾ ನೀರಿನ ಮಟ್ಟ



**ಮಂಗಳವಾರ : 14-05-2024**

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1577.60 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 13 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 3.415 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1576.32 ಅಡಿ |
| ಒಳ ಹರಿವು | 1641 ಕ್ಯುಸೆಕ್ |
| ಹೊರ ಹರಿವು | 215 ಕ್ಯುಸೆಕ್ |
| ಸಾಮರ್ಥ್ಯ | 3.981 ಟಿಎಂಸಿ |

# ಆಧಾರ ತಿದ್ದುಪಡಿಗೆ ತಪ್ಪದ ಅಲೆದಾಟ

### ಮೂರು ಕೇಂದ್ರಗಳು ಸ್ಥಗಿತ । ಕೂಲಿಕೆಲಸ ಬಿಟ್ಟು ಅಲೆದಾಡುತ್ತಿರುವ ಕಾರ್ಮಿಕರು

### ಆಧಾರ್ ತಿದ್ದುಪಡಿಯಾಗದಿದ್ರೆ ವಿದ್ಯಾರ್ಥಿಗಳ ಉನ್ನತ ಶಿಕ್ಷಣ ಪ್ರವೇಶಕ್ಕೆ ಪೆಟ್ಟು



**ಹಂಪಿ ಟೈಮ್ಸ್ ಕೊಟ್ಟೂರು**

ಪಟ್ಟಣದಲ್ಲಿ ಆಧಾರ್ ತಿದ್ದುಪಡಿ ನೆಡೆಯುತ್ತಿದ್ದ ನಾಲ್ಕು ಕೇಂದ್ರಗಳಲ್ಲಿ ತಾಲೂಕು ಕಚೇರಿಯಲ್ಲಿನ ಕೇಂದ್ರ ಹೊರತು ಪಡಿಸಿ 3 ಕೇಂದ್ರಗಳು ಸ್ಥಗಿತಗೊಂಡಿದ್ದು, ಆಧಾರ್ ಕಾರ್ಡ್ ತಿದ್ದುಪಡಿಗೆ ಮಹಿಳೆಯರು, ಪುರುಷರು ಕೆಲಸ, ಕಾರ್ಯ ಬಿಟ್ಟು ದಿನವಿಡೀ ತಾಲೂಕು ಕಚೇರಿಯ ಕೇಂದ್ರದಲ್ಲಿ ಕಾಯುವ ದುಸ್ಥಿತಿ ಸಾರ್ವಜನಿಕರಿಗೆ ಎದುರಾಗಿದೆ.

ಇತ್ತೀಚೆಗೆ ಸರ್ಕಾರ ಬೆಳೆ ಪರಿಹಾರ ಹಾಕಿರುವ ನಿಮಿತ್ತ ಕೆಲ ರೈತರಿಗೆ ಇನ್ನೂ ಹಣ ಬಿದ್ದಿಲ್ಲದ ಕಾರಣ ರೈತರು ಕೃಷಿ ಇಲಾಖೆ, ಕಂದಾಯ ಇಲಾಖೆ ಹಾಗೂ ಬ್ಯಾಂಕ್ ಗಳಿಗೆ ಸಂಪರ್ಕಿಸಿ ಹಣ ಜಮ ಆಗಿಲ್ಲದಿರುವುದರ ಬಗ್ಗೆ ಪ್ರಸ್ತಾಪಿಸಿದಾಗ, ಆಧಾರ್ ಕಾರ್ಡ್ ಫೋನ್ ನಂಬರ್, ತಿದ್ದುಪಡಿ ಇತ್ಯಾದಿ ಮಾಡಿಸಲು ಅಧಿಕಾರಿಗಳು ತಿಳಿಸುವರು.

ಅಧಿಕಾರಿಗಳ ಸೂಚನೆಯಂತೆ, ರೈತರು ತಮ್ಮ ಬೆಳೆ ಪರಿಹಾರ ಜಮ ಆಗಲೆಂದು ಆಧಾರ್ ಕಾರ್ಡ್ ತಿದ್ದುಪಡಿಗೆ ಪಟ್ಟಣದ ಆಧಾರ್ ಕಾರ್ಡ್ ಆನ್ ಲೈನ್ ಕೇಂದ್ರಕ್ಕೆ ಹೋದರೆ ಪಟ್ಟಣದ ಕೆಲ ಕೇಂದ್ರಗಳು ಚಾಲ್ತಿ ಇಲ್ಲದೆ ಇರುವುದರಿಂದ ಗ್ರಾಮೀಣ ಪ್ರದೇಶದ ಜನರು ಅಲ್ಲಿಂದಿಲ್ಲಿಗೆ ಅಲೆದಾಡುವ ದುಸ್ಥಿತಿ ನಿರ್ಮಾಣವಾಗಿದೆ.

ಜೊತೆಗೆ ನೀಟ್ ಪರೀಕ್ಷೆ ಹಾಗೂ ಶಾಲಾ, ಕಾಲೇಜ್ ದಾಖಲೆ ಮಾಡಲು ಆಧಾರ್ ಕಾರ್ಡ್ ಫೋನ್ ನಂಬರ್, ಹೆಸರು ಇತ್ಯಾದಿ ಸಮಸ್ಯೆಗಳನ್ನು ತಿದ್ದುಪಡಿ ಮಾಡುವಂತೆ ಸೂಚಿಸುವುದರಿಂದ ತಾಲೂಕು ಕಚೇರಿಯಲ್ಲಿ ಆಧಾರ್ ಕೇಂದ್ರ, ಬಿಡುವಿಲ್ಲದಂತಾಗಿದೆ, ಇದರಿಂದ ಆನ್ ಲೈನ್ ಕೇಂದ್ರದಲ್ಲಿ ಗ್ರಾಹಕರು ದಿನವಿಡೀ ಕಾಯುವಂತ ಪರಿಸ್ಥಿತಿ ನಿರ್ಮಾಣವಾಗಿದೆ.

ಕೊಟ್ಟೂರು ತಾಲೂಕು ಕೇಂದ್ರ, ಪಟ್ಟಣದಲ್ಲಿ ನಾಲ್ಕು ಕೇಂದ್ರದಲ್ಲಿ ಮಾತ್ರ ಆಧಾರ್ ಕಾರ್ಡ್ ತಿದ್ದುಪಡಿ ಕಾರ್ಯ ನಡೆಯುತ್ತಿದೆ, ಇತ್ತೀಚೆಗೆ ಮೂರು ಕೇಂದ್ರಗಳು ಬಿಎಸ್ಎನ್ಎಲ್ ಕಚೇರಿ ಕೇಂದ್ರ, ಅಂಚೆ ಕಚೇರಿ ಕೇಂದ್ರ ಹಾಗೂ ಎಸ್‌ಬಿಐ ಬ್ಯಾಂಕ್ ಕೇಂದ್ರ ಸ್ಥಗಿತಗೊಂಡಿವೆ ಈ ಹಿನ್ನೆಲೆ ಗ್ರಾಹಕರಿಗೆ ತೊಂದರೆ ಆಗಿದೆ, ಸಂಬಂಧ ಪಟ್ಟ ಅಧಿಕಾರಿಗಳು ಸ್ಥಗಿತಗೊಂಡ ಕೇಂದ್ರಗಳನ್ನು ಪುನಃ ಪ್ರಾರಂಭ ಮಾಡಿಸಿ, ಮಕ್ಕಳ ಓದಿಗೆ ಅನುಕೂಲ ಕಲ್ಪಿಸಬೇಕು ಎಂದರು ಕೊಟ್ಟೂರಿನ ಪ್ರಜ್ಞಾವಂತ ನಾಗರಿಕರು ಆಗ್ರಹಿಸಿದ್ದಾರೆ.

ಪಟ್ಟಣದ 3 ಆಧಾರ್ ತಿದ್ದುಪಡಿಯ ಆನ್ ಲೈನ್ ಕೇಂದ್ರಗಳು ಸ್ಥಗಿತಗೊಂಡ ಬಗ್ಗೆ ನನ್ನ ಗಮನಕ್ಕಿಲ್ಲ, ಕೂಡಲೇ ಮಾಹಿತಿ ಪಡೆದು, ಶೀಘ್ರ ಪ್ರಾರಂಭಕ್ಕೆ ಸೂಚನೆ ನೀಡುವೆ.

– **ಅಮರೇಶ್ ಜಿ.ಕೆ.,** ತಹಶಿಲ್ದಾರರು ಕೊಟ್ಟೂರು.

ಪ್ರಸ್ತುತ ಆಧಾರ್ ಕಾರ್ಡ್ ತಿದ್ದುಪಡಿ, ಹೆಸರು, ಫೋನ್ ನಂಬರ್, ವಿಳಾಸ ಸೇರ್ಪಡೆ ಸೇರಿದಂತೆ ಇತ್ಯಾದಿ ತಿದ್ದುಪಡಿ ಕಾರ್ಯ ರೈತರಿಗೆ ಹಾಗೂ ವಿದ್ಯಾರ್ಥಿಗಳಿಗೆ ಅತ್ಯಂತ ಅವಶ್ಯಕವಾಗಿದ್ದು ಇವರ ಹಿತದೃಷ್ಟಿಯಿಂದ ಸಂಬಂಧ ಪಟ್ಟ ಅಧಿಕಾರಿಗಳು ಶೀಘ್ರ ಈ ಬಗ್ಗೆ ಗಮನ ಹರಿಸಬೇಕು ಎಂದು ಸಾರ್ವಜನಿಕರು ಆಗ್ರಹಿಸಿದರು.

## ವಿಜ್ಞಾನ

# ವಿಮಾನಗಳಲ್ಲಿ ಟೂಬ್‌ಲೆಸ್ ಟೈರ್ ಏಕೆ ಬಳಸುತ್ತಾರೆ?

**ಆರ್.ಬಿ.ಗುರುಬಸವರಾಜ**

ವಿಮಾನಗಳ ಬಿಡಿಭಾಗಗಳು ಮತ್ತು ಯಂತ್ರದ ಕಾರ್ಯ ವಿಧಾನದ ಬಗ್ಗೆ ನೌರಿನ್ ಮತ್ತು ಸಿರಿನ್ ಚರ್ಚಿಸುತ್ತಿದ್ದರು. ಇಬ್ಬರೂ ಮೊಬೈಲ್‌ನಲ್ಲಿ ವಿಮಾನದ ಬಿಡಿಭಾಗಗಳನ್ನು ನೋಡುತ್ತಾ ಮಾತನಾಡುತ್ತಿದ್ದರು. ಅಲ್ಲಿಗೆ ಬಂದ ಸಿರಾಜ್ ಇಬ್ಬರ ಚರ್ಚೆಯನ್ನು ಕೇಳುತ್ತಾ ಕುಳಿತ. ತಕ್ಷಣ ಅವನ ಮನದಲ್ಲೊಂದು ಪ್ರಶ್ನೆ ಮೂಡಿತು. "ಅಕ್ಕ, ವಿಮಾನದಲ್ಲಿ ಏಕೆ ಟೂಬ್‌ಲೆಸ್ ಟೈರ್ ಬಳಸುತ್ತಾರೆ?" ಎಂದು ಪ್ರಶ್ನಿಸಿದ. ನೌರಿನ್ ಮತ್ತು ಸಿರಿನ್ ಇಬ್ಬರೂ ತಮಗೆ ತಿಳಿದುದನ್ನು ಹೇಳಿದರು.

ವಿಮಾನದಲ್ಲಿ ಟ್ಯೂಬ್‌ಲೆಸ್ ಟೈರ್‌ಗಳನ್ನು ಬಳಸಲು ಹಲವಾರು ಕಾರಣಗಳಿವೆ. ಮೊದಲನೆಯದಾಗಿ ಸುರಕ್ಷತೆ. ಟ್ಯೂಬ್ ಹೊಂದಿರುವ ಟೈರ್‌ಗಳಿಗಿಂತ ಟ್ಯೂಬ್‌ಲೆಸ್ ಟೈರ್‌ಗಳು ಹಠಾತ್ತನೇ ಗಾಳಿ ಕಳೆದುಕೊಳ್ಳುವ ಮತ್ತು ಹಠಾತ್ ವೈಫಲ್ಯವನ್ನು ಅನುಭವಿಸುವ



ಸಾಧ್ಯತೆ ಕಡಿಮೆ. ವಿಮಾನದಲ್ಲಿ ಹಠಾತ್ ಟೈರ್ ವೈಫಲ್ಯವು ಅಪಾಯಕಾರಿ ಅಥವಾ ದುರಂತಕ್ಕೆ ಕಾರಣ ವಾಗಬಹುದು. ಆದ್ದರಿಂದ ಟ್ಯೂಬ್‌ಲೆಸ್ ಟೈರ್‌ಗಳು ವಿಮಾನದ ಸುರಕ್ಷತೆಯನ್ನು ಹೆಚ್ಚಿಸುತ್ತವೆ.

ಎರಡನೆಯದಾಗಿ ಟೂಬ್ ಇರುವ ಟೈರ್‌ಗಳಿಗಿಂತ ಟೂಬ್‌ಲೆಸ್ ಟೈರ್‌ನ ತೂಕ ತುಂಬಾ ಕಡಿಮೆ. ವಿಮಾನದಲ್ಲಿ ಕಡಿಮೆ ತೂಕವು ಕಾರ್ಯಕ್ಷಮತೆ ಮತ್ತು ಇಂಧನ ದಕ್ಷತೆಯಲ್ಲಿ ನಿರ್ಣಾಯಕ ಅಂಶವಾಗಿದೆ. ಮೂರನೆಯದಾಗಿ ಟ್ಯೂಬ್‌ಲೆಸ್ ಟೈರ್‌ಗಳಿಗೆ ಕಡಿಮೆ ನಿರ್ವಹಣೆ ಅಗತ್ಯವಿರುತ್ತದೆ. ಟೈರ್‌ಗಳಲ್ಲಿ ಗಾಳಿ ಸೋರಿಕೆಗಳು ಅಥವಾ ಪಂಕ್ಚರ್‌ಗಳು ಆಗುವ ಸಾಧ್ಯತೆ ಕಡಿಮೆ. ಅಲ್ಲದೇ ಟೂಬ್‌ಲೆಸ್ ಟೈರ್ ದುರಸ್ತಿ ಸುಲಭವಾಗಿದೆ. ನಾಲ್ಕನೆಯದಾಗಿ ಟ್ಯೂಬ್‌ಲೆಸ್ ಟೈರ್‌ಗಳು ಟ್ಯೂಬ್ ಹೊಂದಿದ ಟೈರ್‌ಗಳಿಗಿಂತ ಹೆಚ್ಚು ಬಾಳಿಕೆ ಬರುತ್ತವೆ. ಟ್ಯೂಬ್‌ಲೆಸ್ ಟೈರ್‌ಗಳನ್ನು ಹೆಚ್ಚು ದೃಢವಾಗಿ ಮತ್ತು ಬಾಳಿಕೆ ಬರುವಂತೆ ವಿನ್ಯಾಸಗೊಳಿಸಲಾಗಿದೆ. ಐದನೆಯದಾಗಿ ಟ್ಯೂಬ್‌ಲೆಸ್ ಟೈರ್‌ಗಳು ಹೆಚ್ಚಿನ ಒತ್ತಡವನ್ನು ಸಹಿಸುವ ಕಾರ್ಯಕ್ಷಮತೆ ಹೊಂದಿವೆ. ಟ್ಯೂಬ್‌ಲೆಸ್ ಟೈರ್‌ಗಳು ಉತ್ತಮ ನಿರ್ವಹಣೆ ಮತ್ತು ಬ್ರೇಕಿಂಗ್ ವ್ಯವಸ್ಥೆಯನ್ನು ಹೊಂದಿವೆ. ಹಾಗಾಗಿ ವಿಮಾನಗಳಲ್ಲಿ ಟ್ಯೂಬ್‌ಲೆಸ್ ಟೈರ್‌ಗಳನ್ನೇ ಬಳಸುತ್ತಾರೆ.

ಒಟ್ಟಾರೆಯಾಗಿ ವಿಮಾನದಲ್ಲಿ ಟ್ಯೂಬ್‌ಲೆಸ್ ಟೈರ್ ಬಳಕೆಯು ಹಲವಾರು ಪ್ರಯೋಜನಗಳನ್ನು ಹೊಂದಿವೆ. ಟ್ಯೂಬ್‌ಲೆಸ್ ಟೈರ್‌ಗಳು ವಿಮಾನ ತಯಾರಕರು ಮತ್ತು ನಿರ್ವಾಹಕರ ಜನಪ್ರಿಯ ಆಯ್ಕೆಯಾಗಿದೆ ಎಂದು ಒಬ್ಬೊಬ್ಬರು ಒಂದೊಂದು ಅಂಶವನ್ನು ಹೇಳುತ್ತಾ ಸಹೋದರನ ಪ್ರಶ್ನೆಗೆ ಉತ್ತರಿಸಿದರು. ಇತ್ತೀಚಿಗೆ ಬಹುತೇಕ ವಾಹನಗಳಲ್ಲಿ ಟ್ಯೂಬ್‌ಲೆಸ್ ಟೈರ್ ಬಳಸುತ್ತಾರೆ.

# ಎಸ್ಸೆಸ್ಸೆಲ್ಸಿ ಟಾಪರ್ ವಿಶಾಲಾಕ್ಷಿಗೆ ಶಾಸಕರಿಂದ ಸನ್ಮಾನ



**ಹಂಪಿ ಟೈಮ್ಸ್ ಹೊಸಪೇಟೆ**

ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಕನ್ನಡ ಮಾಧ್ಯಮದಲ್ಲಿ ಹೊಸಪೇಟೆ ತಾಲೂಕಿಗೆ ಪ್ರಥಮ ಸ್ಥಾನ ಗಳಿಸಿದ ಸರ್ಕಾರಿ ಮಾಜಿ ಪುರಸಭೆ ಬಾಲಕಿಯರ ಪ್ರೌಢಶಾಲೆಯ ವಿದ್ಯಾರ್ಥಿನಿಯಾದ ಎಸ್. ವಿಶಾಲಾಕ್ಷಿ ಅವರ ಮನೆಗೆ ಶಾಸಕ ಹೆಚ್. ಆರ್. ಗವಿಯಪ್ಪ ಮಂಗಳವಾರ ತೆರಳಿ ಸನ್ಮಾನಿಸಿದರು. ವಿದ್ಯಾರ್ಥಿನಿಯ ಮುಂದಿನ ವಿದ್ಯಾಭ್ಯಾಸಕ್ಕಾಗಿ ಧನ ಸಹಾಯ ಮಾಡಿದರು. 35 ನೇ ವಾರ್ಡಿನ ಆಕಾಶವಾಣಿ ಏರಿಯಾದಲ್ಲಿ ವಾಸಿಸುತ್ತಿರುವ ವೃತ್ತಿಯಲ್ಲಿ ಆಟೋ ಚಾಲಕರಾಗಿರುವ ಎಸ್. ಕುಮಾರಸ್ವಾಮಿ ಅವರ ಮಗಳಾಗಿರುವ ವಿದ್ಯಾರ್ಥಿನಿಯ ಸಾಧನೆಯು ಶ್ಲಾಘನೀಯವಾಗಿದೆ ಎಂದರು.

# ವಿವಿಧೆಡೆ ಶ್ರೀ ಭಗೀರಥ ಮಹರ್ಷಿ ಜಯಂತಿ



**ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಮಂಗಳವಾರದಂದು ನಗರದ ಸಾಂಸ್ಕೃತಿಕ ಸಮುಚ್ಚಯ ಆವರಣದ ಹೊಂಗಿರಣ ಸಭಾಂಗಣದಲ್ಲಿ ಶ್ರೀ ಭಗೀರಥ ಮಹರ್ಷಿ ಜಯಂತಿಯನ್ನು ಸರಳವಾಗಿ ಆಚರಿಸಲಾಯಿತು.

ಮಾದರಿ ನೀತಿ ಸಂಹಿತೆ ಜಾರಿಯಿರುವುದರಿಂದ ಶ್ರೀ ಭಗೀರಥ ಮಹರ್ಷಿ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸುವ ಮೂಲಕ ಸರಳ ಹಾಗೂ ಸಾಂಕೇತಿಕವಾಗಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ, ಇಲಾಖೆಯ ಸಿಬ್ಬಂದಿ ವರ್ಗದವರು ಸೇರಿದಂತೆ ಸಮಾಜದ ಮುಖಂಡರು ಉಪಸ್ಥಿತರಿದ್ದರು.



**ಹಂಪಿ ಟೈಮ್ಸ್ ಹೊಸಪೇಟೆ:**

ನಗರದ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಶ್ರೀ ಭಗೀರಥ ಜಯಂತಿ ಕಾರ್ಯಕ್ರಮವನ್ನು ತಾಲೂಕು ಪಂಚಾಯಿತಿ ಕಚೇರಿಯಲ್ಲಿ ಮಂಗಳವಾರ ಆಚರಿಸಲಾಯಿತು. ಈ ಸಂದರ್ಭದಲ್ಲಿ ತಾಲೂಕು ಪಂಚಾಯಿತಿ ವ್ಯವಸ್ಥಾಪಕರು ಹಾಗೂ ಕಚೇರಿಯ ಎಲ್ಲಾ ಸಿಬ್ಬಂದಿ ವರ್ಗದವರು ಉಪಸ್ಥಿತಿಯಲ್ಲಿದ್ದರು.




# ಮೇ 15 ರಂದು ವಿದ್ಯುತ್ ವ್ಯತ್ಯಯ

**ಹಂಪಿ ಟೈಮ್ಸ್ ಬಳ್ಳಾರಿ**

ನಗರ ಜೆಸ್ಕಾಂ ಉಪವಿಭಾಗ-2 ರ ವ್ಯಾಪ್ತಿಯಲ್ಲಿ ಎಫ್-73 ಫೀಡರ್ ನಿರ್ವಹಣೆ ಕಾರ್ಯವನ್ನು ತುರ್ತಾಗಿ ಕೈಗೆತ್ತಿಕೊಳ್ಳುತ್ತಿರುವುರಿಂದ ಮೇ 15 ರಂದು ಬೆಳಿಗ್ಗೆ 7 ರಿಂದ ಮಧ್ಯಾಹ್ನ 2 ಗಂಟೆಯವರೆಗೆ ಎಫ್-73 ಫೀಡರ್ ವ್ಯಾಪ್ತಿಯ ಬಸವನಕುಂಟೆ, ಕೋಟೆ ಪ್ರದೇಶ, 1 ನೇ ಗೇಟ್, 2 ನೇ ಗೇಟ್, ಸಿದ್ಧಾರ್ಥ ನಗರ, ಸುಧಾ ಕ್ರಾಸ್, ಓ.ಪಿ.ಡಿ ಸೇರಿದಂತೆ ಮುಂತಾದ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬಳ್ಳಾರಿ ನಗರ ಜೆಸ್ಕಾಂ ಉಪವಿಭಾಗ-2ರ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಅಶೋಕ ರೆಡ್ಡಿ ತಿಳಿಸಿದ್ದಾರೆ.

# ಮೊರಾರ್ಜಿ ದೇಸಾಯಿ ಪಿಯು ಪ್ರವೇಶಕ್ಕೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಬಳ್ಳಾರಿ**

ತಾಲ್ಲೂಕಿನ ಕೊಳಗಲ್ಲು (ಅಲ್ಲಿಪುರ) ಹತ್ತಿರದ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ಬಾಲಕಿಯರ ಪದವಿ ಪೂರ್ವ ವಸತಿ ಕಾಲೇಜಿನಲ್ಲಿ 2024-25ನೇ ಶೈಕ್ಷಣಿಕ ವರ್ಷಕ್ಕೆ ಪ್ರಥಮ ಪಿಯುಸಿ (11ನೇ ತರಗತಿ)ಗೆ (ವಿಜ್ಞಾನ ಮತ್ತು ವಾಣಿಜ್ಯ ವಿಭಾಗಗಳಿಗೆ ಮಾತ್ರ) ಉಚಿತ ಪ್ರವೇಶಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ.

ಅಲ್ಪಸಂಖ್ಯಾತರ ಸಮುದಾಯಕ್ಕೆ ಶೇ.75 ರಷ್ಟು, ಇತರೆ ಸಮುದಾಯಕ್ಕೆ ಶೇ.25 ರಷ್ಟು ಮೀಸಲಾತಿ ಇದೆ. ಆಸಕ್ತಿಯುಳ್ಳ ವಿದ್ಯಾರ್ಥಿಗಳು ಮತ್ತು ಪಾಲಕರುಗಳು ವಸತಿ ಶಾಲೆಗೆ ಖುದ್ದಾಗಿ ಭೇಟಿ ನೀಡಿ ಪ್ರಾಂಶುಪಾಲರ ಮೂಲಕ ಉಚಿತವಾಗಿ ಅರ್ಜಿ ಪಡೆದು, ಭರ್ತಿ ಮಾಡಿ ಸಲ್ಲಿಸಬಹುದು. ಜಿಲ್ಲೆಯ ಎಲ್ಲಾ ಅಲ್ಪಸಂಖ್ಯಾತರ ತಾಲೂಕು ಮಾಹಿತಿ ಕೇಂದ್ರಗಳಿಗೆ ಭೇಟಿ ನೀಡಿ, ಅಲ್ಲಿಯೂ ಅರ್ಜಿಗಳನ್ನು ಪಡೆಯಬಹುದು.

ಮಾಹಿತಿಗಾಗಿ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ಬಾಲಕಿಯರ ಪದವಿ ಪೂರ್ವ ವಸತಿ ಕಾಲೇಜು (ಅಲ್ಲಪುರ) ಕೊಳಗಲ್ಲು, ಪ್ರಾಂಶುಪಾಲರ ಕಚೇರಿ ಅಥವಾ ಮೊ.7349008289 ಹಾಗೂ ತಾಲ್ಲೂಕು ಅಲ್ಪಸಂಖ್ಯಾತರ ವಿಸ್ತರಣಾಧಿಕಾರಿ ಅವರ ಮೊ.8746818180 ಗೆ ಸಂಪರ್ಕಿಸಬಹುದು.

**ತಾಲ್ಲೂಕುವಾರು ಮಾಹಿತಿ ಕೇಂದ್ರ:**

ಬಳ್ಳಾರಿ-8310321101, ಸಂಡೂರು-9036925966, 8660575061 ಮತ್ತು ಸಿರುಗುಪ್ಪ-9148889975. ಹೆಚ್ಚಿನ ಮಾಹಿತಿಗಾಗಿ ನಗರದ ಜೋಳದರಾಶಿ ದೊಡ್ಡನಗೌಡ ರಂಗಮಂದಿರ ಹತ್ತಿರದ ಮೌಲಾನ ಅಜಾದ ಭವನದ ಜಿಲ್ಲಾ ಅಲ್ಪಸಂಖ್ಯಾತರ ಜಿಲ್ಲಾ ಅಧಿಕಾರಿಗಳ ಕಾರ್ಯಾಲಯ ಅಥವಾ ದೂ.08392-200125/224 ಗೆ ಸಂಪರ್ಕಬಹುದು ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಧಿಕಾರಿ ವಿಠೋಬಾ ಹೊನಕಾಂಡೆ ತಿಳಿಸಿದ್ದಾರೆ.




Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA